# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಅಕ್ಟೋಬರ್ 30, 2021

ಸಂಪುಟ : 48 ಸಂಚಿಕೆ : 169 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದಾಳಿ ಸಂಚು

ಧಾರವಾಡ, ಅ. 29 – ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ದುರ್ಗಾ ಪೂಜೆ ವೇಳೆ ನಡೆದಿರುವ ದಾಳಿ ಹಿಂದೂಗಳನ್ನು ಬುಡಮೇಲುಗೊಳಿಸಲು ನಡೆಸಲಾದ ಯೋಜಿತ ಸಂಚು. ಈ ಬಗ್ಗೆ ಬಾಂಗ್ಲಾದೇಶದ ಜೊತೆ ಕೇಂದ್ರ ಸರ್ಕಾರ ಮಾತನಾಡಬೇಕು ಎಂದು ಆರ್.ಎಸ್.ಎಸ್. ಒತ್ತಾಯಿಸಿದೆ.

ಮೂರು ದಿನಗಳ ಕಾಲ ನಡೆದ ಆರ್.ಎಸ್.ಎಸ್. ಕಾರ್ಯಕಾರಿಣಿಯಲ್ಲಿ ಈ ಬಗ್ಗೆ ನಿರ್ಣಯ ತೆಗೆದು ಕೊಳ್ಳಲಾಗಿದೆ. ನಿರ್ಣಯದ ಬಗ್ಗೆ ವಿವರ ನೀಡಿರುವ ಸಂಘಟನೆಯ ಜಂಟಿ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ದಾಳಿಯ ಸಂಚು ರೂಪಿಸಿದವರ ವಿರುದ್ಧ ಬಾಂಗ್ಲಾದೇಶ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಹಿಂದೂಗಳನ್ನು ಬುಡಮೇಲುಗೊಳಿಸಲು ದಾಳಿಯ ಸಂಚು ನಡೆಸಲಾಗಿದೆ. (5ನೇ ಪುಟಕ್ಕೆ)

## ಕಾರು ಅಡವಿಟ್ಟು ವಂಚನೆ

### 1.6 ಕೋಟಿ ಮೌಲ್ಯದ 15 ಕಾರು ವಶ: ಓರ್ವನ ಬಂಧನ

ದಾವಣಗೆರೆ, ಅ.29- ಕಂಪನಿಗಳಿಗೆ ಬಾಡಿಗೆ ಬಿಡುವುದಾಗಿ ಮಾಲೀಕರಿಂದ ಕಾರು ಪಡೆದು ಅವುಗಳನ್ನು ಬೇರೆಯವರಿಗೆ ಒತ್ತೆ ಇಟ್ಟು ಹಣ ಪಡೆಯುತ್ತಿದ್ದ ಓರ್ವ ಆರೋಪಿಯನ್ನು ಪೊಲೀಸರು ಬಂಧಿಸಿ, 1.6 ಕೋಟಿ ಮೌಲ್ಯದ 15 ವಿವಿಧ ಕಂಪನಿಯ ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಕಾಂತರಾಜ ಎಂಬಾತನ ಕೆಎ17-Z-9330 ನಂಬರಿನ ಕಾರನ್ನು ಆರೋಪಿಗಳಾದ ಅರ್ಜುನ ಹಾಗೂ ಇತರರು ಕಂಪನಿಗೆ ಬಾಡಿಗೆ ಬಿಡುವ ನೆಪದಲ್ಲಿ ತೆಗೆದುಕೊಂಡು ಹೋಗಿ ಕಾರನ್ನು ಬೇರೆಯವರಿಗೆ ಒತ್ತೆ ಇಟ್ಟು ಹಣ ಪಡೆದಿದ್ದಾರೆ. ಇದೇ ರೀತಿ 15 ರಿಂದ 20 ಜನರ ಕಾರುಗಳನ್ನು ತೆಗೆದುಕೊಂಡು ಹೋಗಿ ಮೋಸ ಮಾಡಿದ್ದಾರೆ. ಈ ಬಗ್ಗೆ ಕೆಟಿಜೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ದಾವಣಗೆರೆ ನಗರ ಉಪವಿಭಾಗದ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಮತ್ತು (4ನೇ ಪುಟಕ್ಕೆ)

## ಶ್ರೀಲಂಕಾ ಬ್ಯಾಂಕ್ ಕಪ್ಪು ಪಟ್ಟಿಗೆ ಸೇರಿಸಿದ ಚೀನ

ಕೊಲಂಬೊ, ಅ. 29 – ಶ್ರೀಲಂಕಾದ ಸರ್ಕಾರಿ ಸ್ವಾಮ್ಯದ ಪೀಪಲ್ಸ್ ಬ್ಯಾಂಕ್ ಅನ್ನು ಚೀನಾದ ರಾಯಭಾರಿ ಕಚೇರಿ ಕಪ್ಪು ಪಟ್ಟಿಗೆ ಸೇರಿಸಿದೆ. ಚೀನಾದ ಕಂಪನಿಯೊಂದು ಕಲುಷಿತ ಜೈವಿಕ ಗೊಬ್ಬರ ಪೂರೈಸಿದ ಕಾರಣಕ್ಕಾಗಿ ಆ ಕಂಪನಿಗೆ ನೀಡಬೇಕಿದ್ದ 4.9 ದಶಲಕ್ಷ ಡಾಲರ್ ಪಾವತಿಯನ್ನು ತಡೆದಿರುವುದು ಚೀನಾ ಅಸಮಾಧಾನಕ್ಕೆ ಕಾರಣವಾಗಿದೆ.

ಶ್ರೀಲಂಕಾದ ಸರ್ಕಾರಿ ಸ್ವಾಮ್ಯದ ಸಿಲೋನ್ ಫರ್ಟಿಲೈಜರ್ ಕಂಪನಿಯು ಚೀನಾದ ಕಿಂಗಡಾವೋ ಸೀವಿನ್ ಬಯೋಟೆಕ್ ಕಂಪನಿಗೆ (5ನೇ ಪುಟಕ್ಕೆ)

## ಕೊವೊವ್ಯಾಕ್ಸ್‌ಗೆ ಅನುಮತಿ ಕೋರಿ ಅರ್ಜಿ

ನವದೆಹಲಿ, ಅ. 29 – ಕೊರೊನಾಗೆ ನೀಡಲಾಗುವ ಕೊವೊವ್ಯಾಕ್ಸ್ ಲಸಿಕೆ ಉತ್ಪಾದಿಸಲು ಅನುಮತಿ ನೀಡುವಂತೆ ಔಷಧ ನಿಯಂತ್ರಕ ಡಿ.ಸಿ.ಜಿ.ಐ. ಬಳಿ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಅರ್ಜಿ ದಾಖಲಿಸಿದೆ.

ಲಸಿಕೆಯ 2/3 ಹಂತದ ಪ್ರಯೋಗದ ವರದಿಯನ್ನು ಕಂಪನಿ ಸಲ್ಲಿಸಿದೆ. ಬ್ರಿಟನ್ ಹಾಗೂ ಅಮೆರಿಕಗಳಲ್ಲಿ ಈ ಲಸಿಕೆಯ ಮೂರನೇ ಹಂತದ ಪ್ರಯೋಗದ ವರದಿಯನ್ನೂ ಸಹ ಸಲ್ಲಿಸಲಾಗಿದೆ.

ಕೊವೊವ್ಯಾಕ್ಸ್ ಲಸಿಕೆ ಸುರಕ್ಷಿತವಾಗಿದೆ. ಇದರಲ್ಲಿ ಯಾವುದೇ ಅಸುರಕ್ಷತೆಯ ಕಳವಳಗಳಿಲ್ಲ ಎಂದು ಲಸಿಕಾ ಕಂಪನಿಯ ಉನ್ನತ ಅಧಿಕಾರಿ ಪ್ರಕಾಶ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

# ಅಕಾಲದಲ್ಲೇ ಅಗಲಿದ ಅಪ್ಪು

## ಹೃದಯಾಘಾತದ ಬರಸಿಡಿಲಿಗೆ ಪುನೀತ್ ರಾಜ್ ವಿಧಿವಶ

ಬೆಂಗಳೂರು, ಅ.29 - ಹೃದಯಾಘಾತದ ಬರಸಿಡಿಲಿಗೆ 'ಅಪ್ಪು' ಖ್ಯಾತಿಯ ಕನ್ನಡ ಚಲನಚಿತ್ರ ರಂಗದ ಖ್ಯಾತ ನಟ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ (46) ವಿಧಿ ವಶರಾಗಿದ್ದಾರೆ.

ಪತ್ನಿ ಅಶ್ವಿನಿ, ಪುತ್ರಿಯರಾದ ಧೃತಿ ಮತ್ತು ವಂದಿತಾ, ಚಿತ್ರ ನಟರು ಹಾಗೂ ಹಿರಿಯ ಸಹೋದರರಾದ ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಇಬ್ಬರು ಸಹೋದರಿಯರು ಹಾಗೂ ಕೋಟ್ಯಂತರ ಅಭಿಮಾನಿಗಳನ್ನು ಪುನೀತ್ ಅಗಲಿದ್ದಾರೆ.

ಇಂದು ಬೆಳಗ್ಗೆ ಜಿಮ್‌ನಲ್ಲಿ ಕಸರತ್ತು ಮಾಡುತ್ತಿದ್ದ ವೇಳೆ ಅವರಿಗೆ ಎದೆ ನೋವು ಕಾಣಿಸಿಕೊಂಡಿತು, ತಕ್ಷಣವೇ ಅವರನ್ನು ಹತ್ತಿರದಲ್ಲೇ ಇದ್ದ ಕ್ಲಿನಿಕ್‌ಗೆ ದಾಖಲಿಸಿ, ನಂತರ ವಿಕ್ರಂ ಆಸ್ಪತ್ರೆಗೆ ಕರೆ ತರಲಾಯಿತು.

ಆಸ್ಪತ್ರೆಗೆ ಕರೆತರುವ ಮಾರ್ಗದಲ್ಲಿಯೇ 11-30 ರಿಂದ 12 ಗಂಟೆ ಮಧ್ಯೆ ಪುನೀತ್ ಅವರು ಭಾರೀ ಹೃದಯಾಘಾತಕ್ಕೆ ಒಳಗಾದರು. ಆಸ್ಪತ್ರೆ ತಜ್ಞರು ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ನೀಡುವ ಮೊದಲೇ ಅವರು ಕೊನೆಯುಸಿರೆಳೆದಿದ್ದರು.

ಪುನೀತ್ ಗಂಭೀರ ಸ್ಥಿತಿ ತಿಳಿಯುತ್ತಿದ್ದಂತೆ, ಅವರ ಕುಟುಂಬದವರು, ಚಿತ್ರರಂಗದ ಗಣ್ಯಾತಿಗಣ್ಯರು, ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ, ಹಲವು ರಾಜಕೀಯ ನಾಯಕರು ಆಸ್ಪತ್ರೆಗೆ ದೌಡಾಯಿಸಿದರು.

ಅವರ ಅಭಿಮಾನಿಗಳ ಮಹಾಪೂರವೇ ಆಸ್ಪತ್ರೆ ಬಳಿ ಜಮಾಯಿಸಿಬಿಟ್ಟಿತು. ಮುಖ್ಯಮಂತ್ರಿ ಅವರು ಆಸ್ಪತ್ರೆಗೆ ಧಾವಿಸಿ, ವೈದ್ಯರು ಹಾಗು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಪುನೀತ್ ಕೊನೆಯಿಸಿರೆಳೆದರೆಂದು ಮಧ್ಯಾಹ್ನ ಪ್ರಕಟಿಸಲಾಯಿತು.

ಇದಕ್ಕೂ ಮುನ್ನವೇ ರಾಜಧಾನಿ ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರೆಡೆ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಿದ ನಂತರ ಅವರ ಕಳೇಬರವನ್ನು ಹಿರಿಯ ಸಹೋದರ ಶಿವರಾಜ್‌ಕುಮಾರ್ ಸಲಹೆಯಂತೆ ಸದಾಶಿವನಗರದ ನಿವಾಸಕ್ಕೆ ತರಲಾಯಿತು. ಪುನೀತ್ ಪಾರ್ಥಿವ ಶರೀರ ಆಗಮಿಸುತ್ತಿದ್ದಂತೆ ಇಡೀ ಕುಟುಂಬ ಸದಸ್ಯರ ಕಣ್ಣೀರ ಕಟ್ಟೆ (5ನೇ ಪುಟಕ್ಕೆ)



### ಬಾಲ್ಯದಲ್ಲೇ 'ಬೆಟ್ಟದ ಹೂವು' ನಟನೆಯಷ್ಟೇ ಅಲ್ಲ ಹಾಡು, ನಿರೂಪಣೆಯಲ್ಲೂ ಛಾಪು

ಬೆಂಗಳೂರು, ಅ. 29- ವರನಟ ಡಾ. ರಾಜ್‌ಕುಮಾರ್ ಅವರ ಕಿರಿಯ ಮಗನಾಗಿದ್ದ ಪುನೀತ್ ರಾಜ್‌ಕುಮಾರ್, ಚಿಕ್ಕ ವಯಸ್ಸಿನಿಂದಲೇ ನಟನೆಯಲ್ಲಿ ಹೆಸರು ಗಳಿಸಿದ್ದರು.

ಬೆಳ್ಳಿ ತೆರೆಯ ಮೇಲೆ ನಟನೆ, ಕಿರು ತೆರೆಯಲ್ಲಿ ಕಾರ್ಯಕ್ರಮ ನಿರೂಪಣೆ, ಚಿತ್ರ ನಿರ್ಮಾಣವಷ್ಟೇ ಅಲ್ಲದೇ, ಗಾಯನದಲ್ಲೂ ಅವರು ತಮ್ಮ ಛಾಪು ಮೂಡಿಸಿದ್ದರು. ಪುನೀತ್ ರಾಜ್‌ಕುಮಾರ್ 17 ಮಾರ್ಚ್ 1975ರಲ್ಲಿ ಚೆನ್ನೈನಲ್ಲಿ ರಾಜಕುಮಾರ್ ಮತ್ತು ಪಾರ್ವತಮ್ಮ ರಾಜಕುಮಾರ್ ಕಿರಿಯ ಮಗನಾಗಿ ಜನಿಸಿದರು. ನಟರಾದ ಶಿವರಾಜಕುಮಾರ್ ಮತ್ತು ರಾಘವೇಂದ್ರ ರಾಜಕುಮಾರ್ ಇಬ್ಬರು ಹಿರಿಯ ಸಹೋದರರು.

ಪುನೀತ್ ಆರು ವರ್ಷದವರಿದ್ದಾಗ, ಅವರ ಕುಟುಂಬ ಬೆಂಗಳೂರಿಗೆ ಬಂದು ನೆಲೆಸಿತು. 10 ವರ್ಷ ವಯಸ್ಸಿನ ತನಕ ತಂದೆ ರಾಜ್‌ಕುಮಾರ್ ಪುನೀತ್ ಹಾಗೂ ಅವರ ಸಹೋದರಿ ಪೂರ್ಣಿಮಾ ಅವರನ್ನು ಚಲನಚಿತ್ರದ ಸೆಟ್‌ಗೆ (5ನೇ ಪುಟಕ್ಕೆ)

### ವಿಧಿಯ ಆಟ ಕ್ರೂರ ಎಂದ ಪ್ರಧಾನಿ, ಗಣ್ಯರ ಸಂತಾಪ

ಬೆಂಗಳೂರು, ಅ. 29- ಚಲನಚಿತ್ರರಂಗ, ರಾಜಕೀಯ, ಕ್ರೀಡೆ ಸೇರಿದಂತೆ ಸಮಾಜದ ಎಲ್ಲ ವರ್ಗಗಳ ಗಣ್ಯರು ಹಾಗೂ ಅಭಿಮಾನಿಗಳು ಪುನೀತ್ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ತಮ್ಮ ಟ್ವಿಟ್ಟರ್‌ನಲ್ಲಿ, ನಟ ಪುನೀತ್ ಜೊತೆಗಿನ ಫೋಟೋ ಹಾಕಿ ಶೋಕ ವ್ಯಕ್ತಪಡಿಸಿದ್ದಾರೆ. ವಿಧಿಯ ಕ್ರೂರ ಆಟ. ಮೇರು ಮತ್ತು ಪ್ರತಿಭಾವಂತ ನಟ ಪುನೀತ್ ರಾಜ್‌ಕುಮಾರ್ ಅವರನ್ನು ನಮ್ಮಿಂದ ಕಸಿದುಕೊಂಡಿದೆ. ಇದು ಸಾಯುವ ವಯಸ್ಸಲ್ಲ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಮುಂಬರುವ ಪೀಳಿಗೆಯೂ ಅವರ ಅದ್ಭುತ ವ್ಯಕ್ತಿತ್ವ ಮತ್ತು ಕಾರ್ಯಕ್ಕಾಗಿ ಅವರನ್ನು ಪ್ರೀತಿಯಿಂದ ಸ್ಮರಿಸುತ್ತಾರೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಸಂತಾಪಗಳು ಎಂದವರು ಹೇಳಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ವರನಟ ಡಾ.ರಾಜಕುಮಾರ್ ಸುಪುತ್ರ, ಖ್ಯಾತ ನಟ ಪುನೀತ್ ರಾಜಕುಮಾರ್ ಅಕಾಲಿಕ ನಿಧನ ಅತೀವ ಆಘಾತವನ್ನುಂಟು ಮಾಡಿದೆ ಎಂದು (5ನೇ ಪುಟಕ್ಕೆ)

### ಕಂಠೀರವ ಕ್ರೀಡಾಂಗಣದಲ್ಲಿ ಅಂತಿಮ ದರ್ಶನ: ಸಿಎಂ

ಬೆಂಗಳೂರು, ಅ.29 - ಪುನೀತ್ ರಾಜ್ ಕುಮಾರ್ ಅಂತ್ಯಕ್ರಿಯೆಯನ್ನು ಆತುರವಾಗಿ ಮಾಡುವುದಿಲ್ಲ, ಅವರ ಎಲ್ಲ ಅಭಿಮಾನಿಗಳೂ ಅಂತಿಮ ದರ್ಶನ ಪಡೆದ ನಂತರವೇ ಅಂತ್ಯಕ್ರಿಯೆ ನಡೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.
ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಭಾನುವಾರ ನಡೆಯುವ ಸಾಧ್ಯತೆ ಇದೆ.
ಪುನೀತ್ ಅವರ ಹಿರಿಯ ಪುತ್ರಿ ಧೃತಿ ಅಮೆರಿಕದಲ್ಲಿದ್ದು, ಅವರು ನಗರಕ್ಕೆ ಬಂದ ನಂತರ ಅಂತ್ಯ ಸಂಸ್ಕಾರ ಕಾರ್ಯ ನಡೆಯಲಿದೆ.
ಅದುವರೆಗೂ ಅವರ ಕಳೇಬರವನ್ನು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಸಾರ್ವಜನಿಕರು ಮತ್ತು (5ನೇ ಪುಟಕ್ಕೆ)

### ಕರುನಾಡು ಕಂಬನಿ

ಪುನೀತ್ ಅಗಲಿಕೆಯ ಸುದ್ದಿ ಕೇಳುತ್ತಿದ್ದಂತೆ ಇಡೀ ರಾಜ್ಯವೇ ಕಂಬನಿ ಮಿಡಿದಿದೆ. ದಾವಣಗೆರೆ ನಗರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲೂ ಅಭಿಮಾನಿಗಳು ಓಣಿಗಳಲ್ಲಿ ಒಟ್ಟಾಗಿ ಸೇರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸಿದರು. ಅಬಾಲ ವೃದ್ಧರಾದಿಯಾಗಿ ಪುನೀತ್ ಅಗಲಿಕೆಗೆ ಮರುಗಿದರು.

### ಸಾವಿನಲ್ಲೂ ಸಾರ್ಥಕತೆ : ಪುನೀತ್ ನೇತ್ರದಾನ

ಬೆಂಗಳೂರು,ಅ.29- 1,800 ಮಕ್ಕಳ ಸಂಪೂರ್ಣ ಶಿಕ್ಷಣ ಹಾಗೂ ಮೈಸೂರಿನಲ್ಲಿ ಶಕ್ತಿಧಾಮ ಹೆಸರಿನಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ವ್ಯವಸ್ಥೆ ನೋಡಿಕೊಳ್ಳುತ್ತಿರುವ ಕನ್ನಡದ ಏಕೈಕ ನಟ ಪುನೀತ್ ರಾಜ್‌ಕುಮಾರ್ ಮಾತ್ರ ಆಗಿದ್ದಾರೆ. ಅಷ್ಟೇ ಅಲ್ಲ 26 ಅನಾಥಾಶ್ರಮ, 45 ಉಚಿತ ಶಾಲೆ, 16 ವೃದ್ಧಾಶ್ರಮ ಹಾಗೂ 19 ಗೋಶಾಲೆಗಳನ್ನು ನಡೆಸುವ ಮೂಲಕ ಪುನೀತ್ ತಮ್ಮ ಉದಾತ್ತ ಹೃದಯವನ್ನು ಮೆರೆದಿದ್ದರು. ಎಂದೂ ಕೂಡ ತಮ್ಮ ಸಾಮಾಜಿಕ ಸೇವೆಯನ್ನು ಪ್ರಚಾರಕ್ಕಾಗಿ ಬಳಸಿಕೊಂಡವರಲ್ಲ, ಎಲ್ಲವನ್ನೂ ತೆರೆಮರೆಯಲ್ಲೇ ಮಾಡುತ್ತಿದ್ದರಲ್ಲದೆ, ಬಡವರಿಗೆ ಸಹಾಯ ಹಸ್ತ ನೀಡುತ್ತಿದ್ದರು. ಪುನೀತ್ ಕಣ್ಣುಗಳನ್ನು ದಾನ ಮಾಡಲು ಕುಟುಂಬದವರು ನಿರ್ಧರಿಸಿದ್ದಾರೆ. ಡಾ. ರಾಜ್ ಸಹ ನೇತ್ರದಾನ ಮಾಡಿದ್ದರು.

### ಎಸ್ಸೆಸ್-ಎಸ್ಸೆಸ್ಸೆಂ ತೀವ್ರ ಸಂತಾಪ

ದಾವಣಗೆರೆ, ಅ.29- ಕನ್ನಡ ಚಿತ್ರರಂಗದ ಪ್ರಸಿದ್ಧ ನಟ ಪುನೀತ್ ರಾಜ್‌ಕುಮಾರ್ ನಿಧನಕ್ಕೆ ಮಾಜಿ ಸಚಿವರು, ಹಾಲಿ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಪುನೀತ್ ಆತ್ಮಕ್ಕೆ ಚಿರಶಾಂತಿ ದೊರೆಯಲಿ. ಅವರ ಅಗಲಿಕೆಯಿಂದ ರಾಜ್ಯದ ಅಭಿಮಾನಿಗಳಿಗೆ, ಕುಟುಂಬ ವರ್ಗಕ್ಕೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

### ಪುನೀತ್ ನಿಧನ ಸಮಷ್ಠಿಗೆ ಆದ ನಷ್ಟ: ಸಂಸದ ಸಿದ್ದೇಶ್ವರ

ದಾವಣಗೆರೆ, ಅ.29- ಬಾಲ್ಯದಿಂದಲೇ ನಟನೆಯನ್ನು ಮೈಗೂಡಿಸಿಕೊಂಡು, ನಟನೆಯ ಉತ್ತುಂಗ ಶಿಖರವನ್ನೇರುತ್ತಿದ್ದ ವೇಳೆ ಕಣ್ಮರೆಯಾಗಿರುವ ನಟ ಪುನೀತ್ ರಾಜ್‌ಕುಮಾರ್ ಅಗಲಿಕೆ ನಿಜಕ್ಕೂ ಕೇವಲ ಸಿನಿಮಾ ರಂಗಕ್ಕೆ ಅಷ್ಟೇ ಅಲ್ಲ, ಬದಲಾಗಿ ಸಮಷ್ಠಿಗೆ ಆದ ನಷ್ಟವೇ ಆಗಿದೆ ಎಂದು ಸಂಸದ ಡಾ. ಜಿ.ಎಂ. ಸಿದ್ದೇಶ್ವರ ಅಭಿಪ್ರಾಯ ಪಟ್ಟಿದ್ದಾರೆ.

ನಟನೆ, ಗಾಯನ, ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಸದಾ ದುರ್ಬಲರ ಏಳಿಗೆಗಾಗಿ ತುಡಿಯುವ ಮನಸ್ಸು ಅವರದಾಗಿತ್ತು. ಅತ್ಯಂತ ನಯ, ವಿನಯವನ್ನು ಮೈಗೂಡಿಸಿಕೊಂಡಿದ್ದ ಪುನೀತ್, ನನಗೆ ಸಾಕಷ್ಟು ಹತ್ತಿರದವರಾಗಿದ್ದರು. ನಮ್ಮ ಜೊತೆ ಅನ್ಯೋನ್ಯವಾಗಿದ್ದ ಪುನೀತ್, ನಮ್ಮ ಮನೆಯ ಸಮಾರಂಭಗಳಿಗೆ ಬಂದು ಹೋಗುವ ಪರಿಪಾಠ (5ನೇ ಪುಟಕ್ಕೆ)

## ಆತ್ಮಹತ್ಯೆ : ರಾಜ್ಯಕ್ಕೆ ಐದನೇ ಸ್ಥಾನ

### ಮೊದಲ ಸ್ಥಾನದಲ್ಲಿ ಮಹಾರಾಷ್ಟ್ರ

ನವದೆಹಲಿ, ಅ. 29 – 2020ರಲ್ಲಿ ದೇಶದಲ್ಲಿ 1,53,052 ಆತ್ಮಹತ್ಯೆಗಳು ಸಂಭವಿಸಿವೆ ಎಂದು ಕೇಂದ್ರ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.

2019ರಲ್ಲಿ 1,39,123 ಆತ್ಮಹತ್ಯೆಗಳು ಸಂಭವಿಸಿದ್ದವು. 2019ಕ್ಕೆ ಹೋಲಿಸಿದರೆ ಕಳೆದ ವರ್ಷ ಆತ್ಮಹತ್ಯೆ ಪ್ರಮಾಣ ಪ್ರತಿ ಲಕ್ಷಕ್ಕೆ 10.4ರಿಂದ 11.3ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್.ಸಿ. ಆರ್.ಬಿ.) ತಿಳಿಸಿದೆ.



ಮಹಾರಾಷ್ಟ್ರದಲ್ಲಿ ಅತಿ ಹೆಚ್ಚಿನ 19,909 ಆತ್ಮಹತ್ಯೆಗಳು ಸಂಭವಿಸಿವೆ. ನಂತರದ ಸ್ಥಾನಗಳಲ್ಲಿ ತಮಿಳುನಾಡು 16,883, ಮಧ್ಯ ಪ್ರದೇಶ 14,578, ಪಶ್ಚಿಮ ಬಂಗಾಳ 13,103 ಹಾಗೂ ಕರ್ನಾಟಕದಲ್ಲಿ 12,259 ಆತ್ಮಹತ್ಯೆಗಳು ಸಂಭವಿಸಿವೆ. ಆತ್ಮಹತ್ಯೆಗಳಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿದ್ದು, ದೇಶದ ಒಟ್ಟು ಆತ್ಮಹತ್ಯೆಗಳಲ್ಲಿ ರಾಜ್ಯದ ಪ್ರಮಾಣ ಶೇ.8ರಷ್ಟಾಗಿದೆ.

ಅತಿ ಹೆಚ್ಚು ಆತ್ಮಹತ್ಯೆ ಸಂಭವಿಸುವ ಈ ಐದು ರಾಜ್ಯಗಳಲ್ಲೇ ಶೇ.50.1ರಷ್ಟು (5ನೇ ಪುಟಕ್ಕೆ)

## ಜನ್ ಧನ್ ಖಾತೆಗಳ ಸಂಖ್ಯೆ 44 ಕೋಟಿಗೆ

ನವದೆಹಲಿ, ಅ. 29 – ಪ್ರಧಾನ ಮಂತ್ರಿ ಜನ್ ಧನ್ ಯೋಜನೆಯಡಿ ತೆರೆಯಲಾದ ಬ್ಯಾಂಕ್ ಖಾತೆಗಳ ಸಂಖ್ಯೆ 44 ಕೋಟಿಗಳಿಗೆ ತಲುಪಿದೆ. ಏಳು ವರ್ಷಗಳ ಹಿಂದೆ ಈ ಯೋಜನೆ ಜಾರಿಗೆ ತರಲಾಗಿತ್ತು.

ಪ್ರಧಾನಿ ಮೋದಿ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಜನ್ ಧನ್ ಯೋಜನೆ ಜಾರಿಗೆ ತಂದಿದ್ದರು. ಬ್ಯಾಂಕಿಂಗ್ ಸೇವೆ, ಹಣ ಪಾವತಿ, ಸಾಲ, ವಿಮೆ, ಪಿಂಚಣಿಯನ್ನು ಕಡಿಮೆ ವೆಚ್ಚದಲ್ಲಿ ನೀಡುವುದು ಈ ಯೋಜನೆಯ ಉದ್ದೇಶವಾಗಿತ್ತು.

ಅಕ್ಟೋಬರ್ 2021ರ ವೇಳೆಗೆ 44 ಕೋಟಿ ಜನ್ ದನ್ ಖಾತೆಗಳನ್ನು ತೆರೆಯಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

## ಭವಿಷ್ಯ ನಿಧಿಗೆ ಶೇ.8.5ರ ಬಡ್ಡಿದರ ನೀಡಲು ಒಪ್ಪಿಗೆ

ನವದೆಹಲಿ, ಅ. 29 – ಭವಿಷ್ಯ ನಿಧಿಗಾಗಿ 2020-21ರ ಸಾಲಿಗೆ ಶೇ.8.5ರ ಬಡ್ಡಿ ದರ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಇ.ಪಿ.ಎಫ್.ಒ.ದ ಐದು ಕೋಟಿಗೂ ಹೆಚ್ಚು ಚಂದಾದಾರರಿಗೆ ಸರ್ಕಾರದ ನಿರ್ಧಾರ ಲಾಭ ತರಲಿದೆ. ಶೇ.8.5ರ ಬಡ್ಡಿ ದರಕ್ಕೆ ಹಣಕಾಸು ಸಚಿವಾಲಯ ಅನುಮತಿ ನೀಡಿದೆ. ಬಡ್ಡಿಯನ್ನು ಐದು ಕೋಟಿಗೂ ಹೆಚ್ಚು ಚಂದಾದಾರ ಖಾತೆಗಳಿಗೆ ಜಮಾ ಮಾಡಲಾಗುವುದು.

## ಶಸ್ತ್ರಚಿಕಿತ್ಸೆ ನಂತರ ರಜನೀಕಾಂತ್ ಚೇತರಿಕೆ

ಚೆನ್ನೈ, ಅ. 29 – ತಮಿಳು ಸೂಪರ್‌ಸ್ಟಾರ್ ರಜನೀಕಾಂತ್ ಅವರು ಶುಕ್ರವಾರ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಮೆದುಳಿಗೆ ರಕ್ತ ಪೂರೈಸುವ ನಾಳಗಳನ್ನು ಸರಿಪಡಿಸಲು ಶಸ್ತ್ರ ಚಿಕಿತ್ಸೆ ನಡೆಸಲಾಗಿದ್ದು, ಅವರೀಗ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯರು ಹೇಳಿದ್ದಾರೆ.

ಅಕ್ಟೋಬರ್ 28ರಂದು ಬಳಲಿಕೆಯ ಕಾರಣದಿಂದಾಗಿ ರಜನೀಕಾಂತ್ ಆಸ್ಪತ್ರೆಗೆ ದಾಖಲಾಗಿದ್ದರು. ತಪಾಸಣೆಯ ನಂತರ ಕಾವೇರಿ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆಗೆ ನಿರ್ಧರಿಸಿದ್ದರು. ರಜನೀಕಾಂತ್ ಅವರ ಮುಂದಿನ ಚಿತ್ರವಾದ 'ಅಣ್ಣಂತೆ' ನವೆಂಬರ್ 4ರ ದೀಪಾವಳಿಯಂದು ತೆರೆಗೆ ಬರಲಿದೆ.

## ಮಹಿಳೆಯರೇ 'ಸ್ಟ್ರಾಂಗ್', ಶಿಕ್ಷಣದಲ್ಲೂ ಮುಂದು: ಡಿಸಿ



ದಾವಣಗೆರೆ, ಅ. 29 - ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದು, ಶಿಕ್ಷಣದಲ್ಲಿ ಪುರುಷರಿಗಿಂತ ಒಂದು ಕೈ ಮೇಲಿದ್ದಾರೆ. ಹೆಣ್ಣು ಕುಲ ಸಮಾಜಕ್ಕೆ ಅತಿ ದೊಡ್ಡ ಕೊಡುಗೆ ನೀಡಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಖಿ ಒನ್ ಸ್ಟಾಪ್ ಸೆಂಟರ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ಸಂಯುಕ್ತಾಶ್ರಯದಲ್ಲಿ ನಗರದ ಗುರು ಭವನದಲ್ಲಿ ಆಯೋಜಿಸಲಾಗಿದ್ದ ಅಂತರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳೇ ಸ್ಟ್ರಾಂಗು ಗುರು ಎಂಬುದು ಸತ್ಯವಾಗಿದೆ. ಪಶ್ಚಿಮ ಬಂಗಾಳದಲ್ಲಿ ಹೆಣ್ಣು ಮಕ್ಕಳನ್ನು ದುರ್ಗೆ ರೂಪದಲ್ಲಿ ಪೂಜಿಸಲಾಗುತ್ತದೆ. ಆ ದೃಷ್ಟಿಯಿಂದ ಹೆಣ್ಣು ಮಕ್ಕಳೆಲ್ಲರೂ ದುರ್ಗೆಯರೇ ಆಗಿದ್ದಾರೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಇತ್ತೀಚೆಗೆ ಮೊಬೈಲ್ ದುರ್ಬಳಕೆ ಮಾಡಿಕೊಂಡು ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಹಾಗೂ ಅತ್ಯಾಚಾರ ನಡೆಸುವ ಪ್ರಕರಣಗಳು ನಡೆಯುತ್ತಿವೆ. ಇಂತಹ ಘಟನೆಗಳು ಗಮನಕ್ಕೆ ಬಂದಾಗ ಸೂಕ್ತ ಪ್ರಾಧಿಕಾರದ ಗಮನಕ್ಕೆ ತರಬೇಕು ಎಂದವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಪಿ ಸಿ.ಬಿ. ರಿಷ್ಯಂತ್, ಹೆಣ್ಣು ಮಕ್ಕಳು ಶಿಕ್ಷಣದಲ್ಲಿ ಮುಂದಿರುತ್ತಾರೆ. ಕೌಟುಂಬಿಕ ಕಾಳಜಿ ಹೊಂದಿರುವ ಹೆಣ್ಣು ಮಕ್ಕಳು, ವ್ಯಸನಕ್ಕೆ ಸಿಲುಕುವ, ಇಲ್ಲವೇ ತಪ್ಪು ದಾರಿ ಹಿಡಿಯುವ ಸಾಧ್ಯತೆಗಳೂ ಕಡಿಮೆ ಎಂದು ಹೇಳಿದರು.

ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಬಾಲ್ಯ ವಿವಾಹದಂತಹ ಪಿಡುಗುಗಳನ್ನು ತಡೆದರೆ ಹೆಣ್ಣು ಮಕ್ಕಳು ಇನ್ನಷ್ಟು ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಹಿರಿಯ ಸಿವಿಲ್ ನ್ಯಾಯಮೂರ್ತಿ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ಕಾರವು ಮಹಿಳೆಯರಿಗಾಗಿ ಅನೇಕ ಕಾರ್ಯಕ್ರಮಗಳನ್ನು (4ನೇ ಪುಟಕ್ಕೆ)

## ಭ್ರಷ್ಟರಿಗೆ ಅಧಿಕಾರ; ಜನರಿಗೆ ಸಂಕಷ್ಟ

### ಭಾರತ ಕಮ್ಯೂನಿಸ್ಟ್ 5ನೇ ಜಿಲ್ಲಾ ಸಮ್ಮೇಳನದಲ್ಲಿ ಸಿಪಿಎಂ ಬಸವರಾಜ್

ದಾವಣಗೆರೆ, ಅ.29- ರಾಜಕೀಯ ಪಕ್ಷಗಳ ಆಮಿಷಕ್ಕೆ ಬಲಿಯಾಗದೆ ಜನಪರ ಕೆಲಸ ಮಾಡುವವರಿಗೆ ನಿಮ್ಮ ಅಮೂಲ್ಯ ಮತ ನೀಡಬೇಕೆಂದು ಸಿಪಿಎಂ ರಾಜ್ಯ ಸಮಿತಿ ಸದಸ್ಯ ಆರ್.ಎಸ್. ಬಸವರಾಜ್ ಮತದಾರರಿಗೆ ಕರೆ ನೀಡಿದರು.

ಅವರು, ಇಂದು ನಗರದ ರೋಟರಿ ಬಾಲಭವನದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್ ವಾದಿ) ವತಿಯಿಂದ ಹಮ್ಮಿಕೊಂಡಿದ್ದ 5ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಅಧಿಕಾರ ನಡೆಸಿದ ಸಂದರ್ಭದಲ್ಲಿ ದೇಶವನ್ನು ಲೂಟಿ ಮಾಡಿವೆ. ಈ ಎರಡೂ ಪಕ್ಷಗಳು ಜನರನ್ನು ಬಡತನದಲ್ಲಿಯೇ ಇಟ್ಟು, ಚುನಾವಣೆಯ ಸಂದರ್ಭದಲ್ಲಿ 500 ರೂ. ನೋಟು ಕೊಟ್ಟು ಎಂಜಲುಗಾಸಿನ ಆಸೆ ತೋರಿಸಿ ಮತ ಪಡೆದು ಅಧಿಕಾರಕ್ಕೆ ಬಂದು ಲೂಟಿ ಹೊಡೆಯುತ್ತಿವೆ ಎಂದು ಆರೋಪಿಸಿದರು.

ಚುನಾವಣೆ ಸಂದರ್ಭದಲ್ಲಿ ಆಮಿಷಕ್ಕೊಳಗಾದ ಮತದಾರರು 500 ರೂ. ನೋಟು ಪಡೆದು ಮತ ನೀಡಿ, ಭ್ರಷ್ಟರನ್ನು ಅಧಿಕಾರಕ್ಕೆ ತಂದಿರುವುದೇ ಈಗ ಜನಸಾಮಾನ್ಯರು ಅನುಭವಿಸುತ್ತಿರುವ ಸಂಕಷ್ಟಕ್ಕೆ ಕಾರಣವಾಗಿದೆ ಎಂದು ಮಾರ್ಮಿಕವಾಗಿ ನುಡಿದರು.

ಕೇಂದ್ರ ಮತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು ದುಡಿಯುವ ವರ್ಗದ ಜನರಿಗೆ ಯಾವುದೇ ಸೌಲಭ್ಯ ಕಲ್ಪಿಸದೆ, ಉಳ್ಳವರು ಮತ್ತು ಶ್ರೀಮಂತರ ಪರವಾದ ನೀತಿಗಳನ್ನು ಜಾರಿಗೆ ತರುತ್ತಿವೆ. ಬಿಜೆಪಿಯ ಮೇಲೆ ಬಹಳ ದೊಡ್ಡ ನಿರೀಕ್ಷೆ ಇಟ್ಟು ಜನರು ಮತ ನೀಡಿ, ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರಕ್ಕೆ ತಂದರು. ಆದರೆ, ಬಿಜೆಪಿ ಅಧಿಕಾರಕ್ಕೆ ಬಂದಾದ ಮೇಲೆ ಜನರ ನಿರೀಕ್ಷೆಯನ್ನು ಹುಸಿಗೊಳಿಸಿದೆ ಎಂದು ದೂರಿದರು.

ಚುನಾವಣೆಯ ಸಂದರ್ಭದಲ್ಲಿ ಹಿಂದಿನ ಯುಪಿಎ ಸರ್ಕಾರ ಹೆಚ್ಚಿಸಿದ ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸುತ್ತೇವೆ ಎಂದು ಹೇಳಿದ್ದರು. ಆದರೆ, ಬಿಜೆಪಿ ಅಧಿಕಾರಕ್ಕೆ ಬಂದಾದ ಮೇಲೆ ಅಡುಗೆ ಎಣ್ಣೆ, ದವಸಧಾನ್ಯ, ಬೇಳೆ-ಕಾಳು, ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆಯನ್ನು ಹೆಚ್ಚಳ ಮಾಡುವ ಮೂಲಕ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ (5ನೇ ಪುಟಕ್ಕೆ)

# ದೇವನಗರಿಯ ಧೀಮಂತ ಮಾಗನೂರು ಬಸಪ್ಪ

ಜೀವನ ಚರಿತ್ರೆಗಳು ಇಂದಿನ ಮಾನವ ಕುಲದ ಭವಿಷ್ಯದ ಬದುಕಿಗೆ ಮಾರ್ಗಸೂಚಿಗಳು. ಸಾಧಕರ, ಮಹಾತ್ಮರ ಬದುಕು ಮುಂದಿನ ಜನಾಂಗಕ್ಕೆ ದಾರಿದೀಪ. ಇತಿಹಾಸವನ್ನು ತಿಳಿಯದವನು ಇತಿಹಾಸವನ್ನು ನಿರ್ಮಿಸಲಾರ. ಗತಿಸಿದ ಮಹಾತ್ಮರ ಬದುಕು ತಿಳಿದು ಬಾಳುವುದು ಅಗತ್ಯ. ಕರ್ನಾಟಕದ ಕಣ್ಮಣಿ, ಕಲಿಯುಗದ ಕರ್ಣ, ವೀರಶೈವ ಪುಣ್ಯಪುರುಷ, ಶೈಕ್ಷಣಿಕ ವಿಕಾಸದ ಕನಸುಗಾರ, ವೀರಶೈವ ಸಮಾಜದ ಜಾಗೃತಿಗೆ ಕಾರಣ ಪುರುಷ, ಕರ್ನಾಟಕದ ಮ್ಯಾಂಚೆಸ್ಟರ್, ದಾವಣಗೆರೆ ಪ್ರಮುಖಿಕ ವರ್ತಕ.. ಹೀಗೆ ಹತ್ತು ಹಲವಾರು ಬಹುಮುಖಿ ವ್ಯಕ್ತಿತ್ವ ಹೊಂದಿ ಬಾಳಿ ಬದುಕಿದ ಶರಣ ಮಾಗನೂರು ಬಸಪ್ಪನವರು ಇತಿಹಾಸದ ನಿರ್ಮಾತೃ. ಶತಮಾನ ಕಂಡ ಮಹಾನ್ ಚೇತನ, ಹಾಗೆಯೇ ನಿತ್ಯ ಸ್ಮರಣೀಯರು. ಸಮಾಜ, ಉದ್ದಿಮೆ, ವ್ಯಾಪಾರ, ಶಿಕ್ಷಣ, ಧರ್ಮ ಹೀಗೆ ವಿವಿಧ ರಂಗಗಳಲ್ಲಿ ಅವರ ಪ್ರಗತಿಪರ ವಿಚಾರಗಳು ನೂತನ ಸಮಾಜ ರಚನೆಗೆ ಪ್ರೇರಕವಾಗಿವೆ.

ಸತ್ತು ಹುಟ್ಟುವನಲ್ಲ ಸಂದೇಹ ನೂತಕಿಯಲ್ಲ
ಆಕಾರ ನಿರಾಕಾರ ನೋಡಯ್ಯಾ
ಕಾಯವಂಚಕನಲ್ಲ, ಜೀವವಂಚಕನಲ್ಲ
ನಿರಂತರ ಸಹಜ ನೋಡಯ್ಯಾ
ಶಂಕೆಯಿಲ್ಲದ ಮಹಿಮನು ನೋಡಯ್ಯಾ
ಕೂಡಲ ಸಂಗನ ಶರಣನುಪಮಾತೀತ ನೋಡಯ್ಯಾ

ಶರಣರ ಅಂತಃಸತ್ವವನ್ನು ಬಸವಣ್ಣನವರು ಮೇಲಿನ ವಚನದಲ್ಲಿ ಮನೋಜ್ಞವಾಗಿ ತಿಳಿಸಿದ್ದಾರೆ. ಈ ವಚನಕ್ಕೆ ಅನ್ವರ್ಥವಾಗಿ ಬದುಕಿದವರು ಮಹಾಶರಣ ಮಾಗನೂರು ಬಸಪ್ಪನವರು. ಆರೂಢ ದಾಸೋಹಿ, ದಾನ ಚಿಂತಾಮಣಿ, ಅನುಪಮ ದಾನಿ, ಮಹಾಶರಣ ಲಿಂಗೈಕ್ಯ ಮಾಗನೂರು ಬಸಪ್ಪನವರ ಸಾಧನೆ ಮತ್ತು ಆದರ್ಶ ಈ ಎರಡನ್ನೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡವರಾಗಿದ್ದರು.

ಲಿಂಗಪೂಜೆ, ಜಂಗಮ ದಾಸೋಹ, ಲೋಕ ಕಲ್ಯಾಣಕ್ಕೆ ಅಗತ್ಯವಾದ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಲಿಂಗಪೂಜೆಯಿಂದ ಆತ್ಮೋದ್ಧಾರ ಮಾಡಿಕೊಳ್ಳಬೇಕು. ಜಂಗಮ ದಾಸೋಹದ ಮೂಲಕ ಆತ್ಮೋದ್ಧಾರದ ಶಕ್ತಿಯನ್ನು ಲೋಕ ಕಲ್ಯಾಣಕ್ಕೆ ಬಳಸಬೇಕು. ಅದಕ್ಕಾಗಿಯೇ ಬಸವಣ್ಣನವರು ಎನ್ನ ಲಿಂಗ ವ್ಯಸನಿ... ಜಂಗಮ ಪ್ರೇಮಿ ಎಂದೆನಿಸಯ್ಯ... ಎಂದು ಪ್ರಾರ್ಥಿಸುತ್ತಾರೆ. ಹೀಗೆ ಲಿಂಗ ವ್ಯಸನಿ, ಜಂಗಮ ಪ್ರೇಮಿಯಾದವರು ಅಪರೂಪ,



ಅಂತಹ ಅಪರೂಪದವರಲ್ಲಿ ಶರಣ ಮಾಗನೂರು ಬಸಪ್ಪನವರೂ ಒಬ್ಬರು.

ಆರೂಢ ದಾಸೋಹಿ, ಧರ್ಮಚಿಂತಾಮಣಿ ಎಂದೇ ಜನಮಾನಸದಲ್ಲಿ ನೆಲೆ ನಿಂತಿರುವ ಬಸಪ್ಪನವರು, ಬಸವಣ್ಣನವರ ತತ್ವಗಳಂತೆ ಬದುಕಿ ತೋರಿಸಿದವರು. ಆರೂಢ ದಾಸೋಹಿ

**ನಿಂದಿಸುವವನೊಬ್ಬ, ಸ್ತುತಿಸುವವನೊಬ್ಬ ಇವರಿಬ್ಬರೂ ಪರಮ ಬಂಧುಗಳು ಆ ಯೋಗಿಯ ಪುಣ್ಯವನೊಬ್ಬ ಕೊಂಬ ಪಾಪವನೊಬ್ಬ ಕೊಂಬ,**

**ಇದು ಕಾರಣ ಗುರುಪ್ರಿಯ ಚೆನ್ನಬಂಕೇಶ್ವರನಲ್ಲಿ ಸತ್ಯ ಶರಣರು ನಿತ್ಯ ಮುಕ್ತರು**

**ಎಂಬ ಶರಣ ಸುಂಕದ ಬಂಕಣ್ಣನ ಮಾತಿನಂತೆ ಬಸಪ್ಪನವರು ಸತ್ಯ ಶರಣರು ಇಂತಹ ಅಭೂತ ವ್ಯಕ್ತಿತ್ವದ ವ್ಯಕ್ತಿಯನ್ನು ಕಾಲ್ಪನಿಕವೆನ್ನುವಂತೆ ಸಿನಿಮಾಗಳಲ್ಲಿ, ಕಥೆ, ಪುರಾಣಗಳಲ್ಲಿ ಕೇಳಿದ್ದೇವೆ. ಆದರೆ ಬಸಪ್ಪನವರು ಇಂದಿನ, ಮುಂದಿನ ಪೀಳಿಗೆಗೂ ಆದರ್ಶಪ್ರಾಯರು**

**'ಪರೋಪಕಾರಂ ಇದಂ ಶರೀರಂ' ಎಂಬ ಮಾತನ್ನು ತಮ್ಮ ಬದುಕಲ್ಲಿ ಸಾರ್ಥಕ ಮಾಡಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ.**

ಬಿರುದು ಬರಿ ಮಾತಿನ ಬಿರುದಲ್ಲ, ಆರೂಢ ಎಂದರೆ ಜೀವನ್ಮುಕ್ತ ಎತ್ತರಕ್ಕೆ ಏರಿದವನು. ತತ್ವಜ್ಞಾನಿ ಎನ್ನುವ ಅರ್ಥ ಕೂಡ ಹೌದು. ಬಸಪ್ಪನವರಿಗೆ ದಾನ ಚಿಂತಾಮಣಿ, ಅನುಪಮ ದಾನಿ ಇವು ಕೇವಲ ಅರ್ಥಗಳಲ್ಲಿ ಅನ್ವರ್ಥಗಳು.

ಸಿರಿಗೆರೆ ತರಳುಬಾಳು ಜಗದ್ಗುರು ಬೃಹನ್ಮಠದ ಹಿರಿಯ ಜಗದ್ಗುರು ಶ್ರೀ ಶಿವಕುಮಾರ ಶಿವಾ ಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನ ದಲ್ಲಿ ನಡೆದವರು. ಜಾತ್ಯತೀತವಾಗಿ ದಾವಣಗೆರೆಯಲ್ಲಿ ಎಲ್ಲಾ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಅಭ್ಯುದಯಕ್ಕೆ ನೆರವಾದವರು. ಈಗ ದಾವಣಗೆರೆಯಲ್ಲಿರುವ ಹಲವಾರು ಪ್ರತಿಷ್ಠಿತ ಸಂಘ, ಸಂಸ್ಥೆಗಳ (ಬಾಪೂಜಿ ವಿದ್ಯಾಸಂಸ್ಥೆ, ಮೆಡಿಕಲ್ ಕಾಲೇಜು ಇತ್ಯಾದಿ) ಸ್ಥಾಪನೆಯಲ್ಲಿ, ಎಲ್ಲಾ ಜನಾಂಗದವರಿಗೆ ವಸತಿ ನಿಲಯಗಳ ಸ್ಥಾಪನೆಯಲ್ಲಿ ಮಾಗನೂರು ಬಸಪ್ಪನವರ ಶ್ರಮ ಅಪಾರವಾದದು.

ಕಡು ಬಡತನದಲ್ಲಿ ಹುಟ್ಟಿ, ಬೆಳೆದ ಈ ಜೀವ ಹುಟ್ಟಿದ ಕೆಲವೇ ತಿಂಗಳುಗಳಲ್ಲಿ ತಾಯಿಯನ್ನು, 13 ನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು, ಈ ಸಂಕಟದಿಂದ ಪಾರಾಗಲು, ಬದುಕು ಕಟ್ಟಿಕೊಳ್ಳಲು ಅವರು ಆಯ್ಕೆ ಮಾಡಿಕೊಂಡಿದ್ದು ದೇವನಗರಿ ಎಂಬ ದಾವಣಗೆರೆಯನ್ನು. ಬೇರೆ ಬೇರೆ ಶ್ರೀಮಂತ ವರ್ತಕರ ಅಂಗಡಿಯಲ್ಲಿ ಗುಮಾಸ್ತರ ಕೆಲಸ ಮಾಡಿ, ಅದರಿಂದ ಬಂದ ಅಲ್ಪ ಹಣದಲ್ಲಿಯೇ ಉಳಿತಾಯ ಮಾಡಿ, ತುಂಬಾ ಚತುರತೆಯಿಂದ ಮುಂದೆ ಬಂದ ಬಸಪ್ಪನವರ ವಿದ್ಯಾಭ್ಯಾಸ ಕೇವಲ 7 ನೆಯ ತರಗತಿಯವರೆಗೆ ಮಾತ್ರ. ಬದುಕಿನ ರಂಗವೇ ಅವರ ಪಾಠಶಾಲೆ. ಅವರ ಜೀವನದ ಅನುಭವವೇ ಅವರಿಗೆ ದೊಡ್ಡ ಪಾಠವಾಗಿತ್ತು.

ಯಾವ ಡಿಗ್ರಿಯನ್ನೂ ಸಂಪಾದಿಸದೇ ಬರೀ ಬದುಕಿನ ಪಾಠದಿಂದ ಪಡೆದ ದಿವ್ಯ ಅರಿವಿನಿಂದ ದೈವ ಮಾನವತ್ವ ಪಡೆದ ಈ ವಿವೇಕದ ವ್ಯಕ್ತಿತ್ವಕ್ಕೆ ಪುಣ್ಯಸ್ಮರಣೆಯ ದಿನದಂದು ಶ್ರದ್ಧಾಂಜಲಿ ಅರ್ಪಿಸಿದರೆ ಸಾಲದು, ಅವರ ಬದುಕಿದ ತತ್ವಾದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಸಮಾಜಕ್ಕೆ ನೀಡುವಂತಾಗಲು ಇಂದಿನ ವಿದ್ಯಾರ್ಥಿಗಳಲ್ಲಿ ಈ ಮಾನವೀಯತೆಯ ಮೌಲ್ಯದ ಮೂರ್ತಿಯ ಬಗ್ಗೆ ತಿಳಿಯಲು, ನಮ್ಮ ಸ್ಥಳೀಯ ಮಟ್ಟದಲ್ಲಾದರೂ ನಮ್ಮ ವಿಶ್ವವಿದ್ಯಾಲಯಗಳು ಪಠ್ಯವಸ್ತುವಿನ ರೂಪದಲ್ಲಿ ತಿಳಿಸುವ ಪ್ರಯತ್ನ ಮಾಡಬೇಕಿದೆ.

ಈ ಹಿನ್ನೆಲೆಯಲ್ಲಿ ಮಾಗನೂರು ಬಸಪ್ಪನವರ 26ನೇ ಪುಣ್ಯಸ್ಮರಣೆಯ ಸ್ಮರಣಾರ್ಥ ಪ್ರಕಟಗೊಳ್ಳಲಿರುವ 'ಸಂಸ್ಮರಣಾ ಗ್ರಂಥವಾಗಿ ಹೊರಬರಲಿದೆ. ಒಬ್ಬ ವ್ಯಕ್ತಿ ಸಾಧಾರಣ ಪರಿಸ್ಥಿತಿಯಿಂದ ಅಸಾಮಾನ್ಯರಾಗಿ ಬೆಳೆದು ಹೆಮ್ಮರವಾದ ನಿದರ್ಶನಕ್ಕೆ ಶರಣ ಮಾಗನೂರು ಬಸಪ್ಪನವರ ಬದುಕು ಕಳಸಪ್ರಾಯವಾಗಿದೆ.

**-ಶ್ರೀಮತಿ ಡಾ.ಅನಿತಾ ಹೆಚ್. ದೊಡ್ಡಗೌಡರ್,**
ಸಹಾಯಕ ಪ್ರಾಧ್ಯಾಪಕರು,
ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯ.

# ಕ್ರಿಭ್ಕೋ ಕಂಪನಿಯಿಂದ ಮಕ್ಕಳ ಶಿಕ್ಷಣಕ್ಕೆ ಸಹಾಯ

ಮಲೇಬೆನ್ನೂರು, ಅ.29- ಕೃಷಿಕ ಕಂಪನಿ ಮಕ್ಕಳ ಶಿಕ್ಷಣಕ್ಕೆ ಗಮನ ಹರಿಸಿರುವುದು ಶ್ರೇಷ್ಠ ಕಾರ್ಯ ಎಂದು ತಾಲ್ಲೂಕು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಾಮಕೃಷ್ಣಪ್ಪ ಅಭಿಪ್ರಾಯಪಟ್ಟರು.




ಧೂಳೆಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಕ್ರಿಭ್ಕೋ ಕಂಪನಿ ನೀಡಿದ ಟೀ-ಶರ್ಟ್, ಬ್ಯಾಗ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಒಳಗೆ, ಹೊರಗೆ ಬೆಳೆಯಬೇಕು. ಉಪಾಧ್ಯಾಯರು ಬರೀ ಬೆಲ್, ಬಿಲ್ ಮತ್ತು ವಿಲ್‌ಗಾಗಿ ಕರ್ತವ್ಯ ಮಾಡದೇ, ಮಕ್ಕಳ ಪ್ರತಿಭೆಗೆ ತಕ್ಕ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದರು.

ಕ್ರಿಭ್ಕೋ ಕಂಪನಿಯ ಮಾರಾಟ ವ್ಯವಸ್ಥಾಪಕ ರಾಮ್ ಕುಮಾರ್ ಮಾತನಾಡಿ ಮನುಷ್ಯ ತಂದೆ, ತಾಯಿ, ಗುರು ಮತ್ತು ದೇವರಿಗೆ ಗೌರವ ನೀಡ ಬೇಕಿದೆ. ಶಿಕ್ಷಣ ಮುಖ್ಯ ವಿಷಯವಾಗಿದ್ದು, ವಿದ್ಯಾರ್ಥಿಗಳು ಹರಿಯುವ ನೀರಂತೆ ಹೊಳೆಯಲು ರಾಷ್ಟ್ರೀಯ ಐಕ್ಯತೆ, ಸಾರ್ವಭೌಮತೆ ಮೂಡಿಸುವ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುತ್ತೇನೆ ಎಂದು ಭರವಸೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದಪ್ಪ ಮಾತನಾಡಿ, ಸರ್ಕಾರ ಮಕ್ಕಳಿಗೆ ಅನೇಕ ಸೌಲಭ್ಯಗಳನ್ನು ನೀಡಿದೆ. ಶಿಕ್ಷಕರು ಶಾಲೆಯ ಅಭಿವೃದ್ಧಿ ಮಾಡಿ ಮಾದರಿಯಾಗಿದ್ದಾರೆ. ಹೆಸರಿಗೆ, ಸಂಬಳಕ್ಕೆ ಮಾತ್ರ ಶಿಕ್ಷಕರಾಗದೇ ಮಕ್ಕಳ ಬಗ್ಗೆ ಚಿಂತಿಸಲು ಕರೆ ನೀಡಿದರು.

ಎಸ್‌ಡಿಎಂಸಿ ಅಧ್ಯಕ್ಷ ನಿಜಲಿಂಗಪ್ಪ, ಗ್ರಾಮದ ಮುಖಂಡರಾದ ಕುಬೇರಪ್ಪ, ಗ್ರಾ.ಪಂ. ಸದಸ್ಯ ಚನ್ನಯ್ಯ, ಹಾಲನಗೌಡ, ಕೆ.ಜಿ. ಪ್ರಕಾಶ್, ಶಿವನಗೌಡ, ತಿಪ್ಪಣ್ಣ, ದೈಹಿಕ ಶಿಕ್ಷಣ ಶಿಕ್ಷಕ ರುದ್ರಪ್ಪ, ಶಂಕ್ರಾನಾಯ್ಕ್, ಮುಖ್ಯ ಶಿಕ್ಷಕ ಬಸವರಾಜ್, ಸರ್ಕಾರಿ ನೌಕರರ ಸಂಘದ ಕೋಶಾಧಿಕಾರಿ ಶಿವಮೂರ್ತಿ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆ, ಕ್ರಿಭ್ಕೋ ಕ್ಷೇತ್ರಾಧಿಕಾರಿ ಕುಮಾರ ಸ್ವಾಮಿ, ಪೌಢ ಶಾಲಾ ಶಿಕ್ಷಕ ಡಿ.ಎಂ. ಮಂಜುನಾಥಯ್ಯ, ಮುಖ್ಯಶಿಕ್ಷಕಿ ಜ್ಯೋತಿ, ವಿನೋದಮ್ಮ, ಮುದ್ದೇರ ಹನುಮಂತಪ್ಪ ಇನ್ನಿತರರಿದ್ದರು.

# ಲಾರಿ ಚಾಲಕ ಸೇರಿ ಇಬ್ಬರ ಮೇಲೆ ಹಲ್ಲೆ : ನಗದು-ಮೊಬೈಲ್ ದರೋಡೆ

ದಾವಣಗೆರೆ, ಅ.29- ಲಾರಿ ಚಾಲಕ ಮತ್ತು ಜೊತೆಗಿದ್ದವನ ಮೇಲೆ ನಾಲ್ವರು ಹಲ್ಲೆ ನಡೆಸಿ, ಅವರ ಬಳಿಯಿದ್ದ ದುಬಾರಿ ಮೊಬೈಲ್ ಹಾಗೂ ನಗದು ದರೋಡೆ ಮಾಡಿರುವ ಘಟನೆ ಇಲ್ಲಿನ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ ಗ್ರಾಮದ ಲಾರಿ ಚಾಲಕ ಸಂಜಯ್ ಮತ್ತು ಈತನ ಮಾವ ಸುನೀಲ್ ಇಬ್ಬರೂ ತಮ್ಮ ಲಾರಿಯಲ್ಲಿ ಜನರೇಟರ್‌ಗಳನ್ನು ಲೋಡ್ ಮಾಡಿಕೊಂಡು ಚೆನ್ನೈಗೆ ಇದೇ 27ರಂದು ರಾಷ್ಟ್ರೀಯ ಹೆದ್ದಾರಿ-48ರ ರಸ್ತೆಯ ಮುಖೇನ ಹೋಗುತ್ತಿದ್ದಾಗ, ರಾತ್ರಿ ಊಟ ಮಾಡಲು ಬಾಡಾ ಕ್ರಾಸ್ ಬಳಿ ಲಾರಿಯನ್ನು ನಿಲ್ಲಿಸಿ ಊಟಕ್ಕೆಂದು ಹೋದಾಗ, ಹಣ ಇಲ್ಲದಿದ್ದ ಕಾರಣ ಎಟಿಎಂ ಹುಡುಕಿಕೊಂಡು ತೋಳ ಹುಣಸೆ ರಸ್ತೆ ಆಂಜನೇಯ ಕಾಟನ್ ಮಿಲ್ ಕಡೆ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಹಿಂದಿನಿಂದ ಎರಡು ಬೈಕ್ ಗಳಲ್ಲಿ ಬಂದ ನಾಲ್ವರು ಇವರಿಬ್ಬರಿಗೆ ಬೈಕ್ ಡಿಕ್ಕಿಪಡಿಸಲು ಯತ್ನಿಸಿದ್ದು, ಅದರಿಂದ ತಪ್ಪಿಸಿಕೊಂಡಾಗ ವಿನಾಕಾರಣ ಬೈಯ್ಯುತ್ತಾ ಹಲ್ಲೆ ನಡೆಸಿ, ಬಳಿಯಿದ್ದ 32 ಸಾವಿರ ಮೌಲ್ಯದ ಮೊಬೈಲ್, 2 ಸಾವಿರ ನಗದು ಕಿತ್ತುಕೊಂಡು ಪರಾರಿಯಾಗಿದ್ದಾರೆ.


**ರಶೀದಿ ಕಳೆದಿದೆ**
ಶೇಖರ್ ಆಗ್ರೋ ಇಂಡಸ್ಟ್ರೀಸ್ ದಾವಣಗೆರೆ ಇದರ ಮಾಲೀಕರಾದ ಎಂ.ಕೆ. ಚಂದ್ರಶೇಖರಪ್ಪ ಹೆಸರಿನ ಉಗ್ರಾಣ ರಶೀದಿ (ಸಂಖ್ಯೆ 0098512) ಕಳೆದಿದ್ದು, ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರಿಗೆ ಸಂಪರ್ಕಿಸಿ ತಲುಪಿಸಲು ಕೋರಿದೆ.
77609 66966

**ಬೇಕಾಗಿದ್ದಾರೆ**
ರಾತ್ರಿ ಪಾಳ್ಯದಲ್ಲಿ ಕೆಲಸ ಮಾಡಲು ಡಿಸೈನಿಂಗ್ ಅನುಭವವಿರುವ ಕಂಪ್ಯೂಟರ್ ಆಪರೇಟರ್ (ಹುಡುಗರು) ಬೇಕಾಗಿದ್ದಾರೆ. ಸಂಪರ್ಕಿಸಿ : ಬೆಳಿಗ್ಗೆ 11 ಗಂಟೆಗೆ
08192 254736

**ಮನೆಗಳು ಮಾರಾಟಕ್ಕಿವೆ**
SS B' Block ಪಶ್ಚಿಮ 30×40 ಡೂಪ್ಲೆಕ್ಸ್ (Full furnished), ಬಸವೇಶ್ವರ ಬಡಾವಣೆ ಉತ್ತರ 30×40, ಪಶ್ಚಿಮ 30×40 ಕೆಳಗೆ ಮನೆ, ಮೇಲೆ ಮನೆ, ಅದರ ಮೇಲೆ 1BHK,
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಕಲ್ಯಾಣ ಮಂಟಪದಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ :
94818 68576

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಬೇಕಾಗಿದ್ದಾರೆ**
ಅನುಭವವುಳ್ಳ ಸ್ಟಾಫ್ ನರ್ಸ್ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು.
ಮೊ: 99725 23910

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 30×50, ಪೂರ್ವ-ಉತ್ತರ corner 40×67, ಪಶ್ಚಿಮ 40×30, ಬನಶಂಕರಿ ಬಡಾವಣೆ ಪೂರ್ವ 40×65, ಪಶ್ಚಿಮ 30×40
ಐಗೂರು ವಿಜಯಕುಮಾರ್
99457 02495

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ದಾವಣಗೆರೆ ನಗರ ಹಾಗೂ ಸುತ್ತ ಸೈಟುಗಳು ಹಾಗೂ ಮನೆಗಳು ಮಾರಾಟಕ್ಕಿವೆ. (20×30, 30×40, 30×50, 40×60). ಸಂಪರ್ಕಿಸಿ
97432 09680, 83101 50590

**ಮನೆ ಬಾಡಿಗೆ ಇದೆ**
1 ಕಿಚನ್ ವಿತ್ ರೂಮ್ ಇರುವ ಔಟ್ ಹೌಸ್ ಮನೆ ಬಾಡಿಗೆಗೆ ಇದೆ. ವಿಚಾರಿಸಿ: **ಸಂದೀಪ್**
D.No. 2000/48, 11ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ-2
97421 54244

**ಮಾರಾಟಕ್ಕೆ**
ಸ್ವಾಮಿ ವಿವೇಕಾನಂದ ಬಡಾವಣೆ ಸೈಟ್ (ಪಶ್ಚಿಮ) 30×60, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64, ವಿದ್ಯಾನಗರ ಸೈಟ್ (ದಕ್ಷಿಣ) 40×60, ತರಳಬಾಳು ಬಡಾವಣೆ ಸೈಟ್ (ದಕ್ಷಿಣ) 30×50, SS ಲೇಔಟ್ ಸೈಟ್-40×63, ಮಹಾಲಕ್ಷ್ಮಿ ಲೇಔಟ್ ಸೈಟ್ ( ಉತ್ತಮ್ ಚಂದ್ - ಪಶ್ಚಿಮ) 35×61,
78996 36597, 99165 25828

**ಮನೆಗಳು ಮಾರಾಟಕ್ಕಿವೆ**
ಜಯನಗರ ಮುಖ್ಯರಸ್ತೆ ಹತ್ತಿರ ಉತ್ತರ 30×40, ಬಾಲಾಜಿ ಲೇಔಟ್ ಪಶ್ಚಿಮ 30×50, 3 BHK
ಐಗೂರು ವಿಜಯಕುಮಾರ್
99457 02495

**ಸೈಟ್‌ಗಳು ಮಾರಾಟಕ್ಕಿವೆ**
ದೂಡಾದಿಂದ ಫೈನಲ್ ಅಪ್ರೂವಲ್ ಆದ ಸೈಟ್‌ಗಳು ಯರಗುಂಟೆಯ ಶಿವಪುರದಲ್ಲಿ ಮಾರಾಟಕ್ಕಿವೆ.
M: 94838 62779

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
80739 86139

**2 BHK ಮನೆ ಲೀಸ್‌ಗೆ ಇದೆ**
ನಿಟುವಳ್ಳಿ ಹೊಸಬಡಾವಣೆ, ಬನಶಂಕರಿ ದೇವಸ್ಥಾನ ರಸ್ತೆಯಲ್ಲಿ ಮೊದಲನೆ ಅಂತಸ್ತು, ಉತ್ತರ ದಿಕ್ಕಿನಲ್ಲಿ 8 ಲಕ್ಷಕ್ಕೆ ಲೀಸ್‌ಗೆ ಇದೆ. (ಸಸ್ಯಹಾರಿಗಳಿಗೆ ಮೊದಲ ಆದ್ಯತೆ)
97435 59986

**ಸೋಲಾರ್ ವಾಟರ್ ಹೀಟರ್ ಸೇಲ್ಸ್, ಸರ್ವೀಸ್ ಎಕ್ಸ್‌ಚೇಂಜ್.**
99642 84060

**SHOPS FOR RENT**
(with wash Room Facility)
N.R. Road, Davangere.
94483 69523

**ಹೊಸ ಕಟ್ಟಡ ಮಾರಾಟಕ್ಕಿದೆ**
ನಿಜಲಿಂಗಪ್ಪ ಬಡಾವಣೆ, ಆಂಜನೇಯ ದೇವಸ್ಥಾನ ಹತ್ತಿರ, ಮೂಲೆ ನಿವೇಶನದಲ್ಲಿ ಹೊಸದಾಗಿ ಕಟ್ಟಿರುವ 3 ಮನೆ ಮತ್ತು 2 ಅಂಗಡಿಗಳುಳ್ಳ 3 ಅಂತಸ್ತಿನ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ
90088 78676

**ಬೇಕಾಗಿದ್ದಾರೆ**
ಕೆಲಸಕ್ಕಾಗಿ ಹುಡುಗರು ಬೇಕಾಗಿದ್ದಾರೆ.
**ನ್ಯೂ ನಂದಿ ಲಾಡ್ಜ್**
ಎಲ್.ಐ.ಸಿ.ಆಫೀಸ್ ಹತ್ತಿರ ಕೆ.ಆರ್.ರಸ್ತೆ, ದಾವಣಗೆರೆ.
92421 21266, 08192- 276411

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ 12ನೇ ಕ್ರಾಸ್, 3ನೇ ಮೇನ್‌ನಲ್ಲಿ ಪೂರ್ವ ದಿಕ್ಕಿನ, 24 ಗಂಟೆ ನೀರಿನ ಸೌಲಭ್ಯವಿರುವ ವಿಶಾಲವಾದ ಹಾಲ್ ಹೊಂದಿರುವ ಮನೆ. ಎರಡನೇ ಮಹಡಿಯಲ್ಲಿ ಒಂದು ಬೆಡ್ ರೂಮಿನ ಅಟ್ಯಾಚ್ ಬಾತ್ ರೂಮಿರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ
94489 23704, 94807 78709

**ಸೌಂದರ್ಯವರ್ಧಕ ಚಿಕಿತ್ಸೆ**
ವಿಶಿಷ್ಟವಾದ ಆಯುರ್ವೇದದ ಗಿಡ ಮೂಲಿಕೆಗಳಿಂದ ನೈಸರ್ಗಿಕವಾಗಿ ನಿಮ್ಮ ಮುಖದ ಕಾಂತಿಯನ್ನು ಹೆಚ್ಚಿಸಿಕೊಳ್ಳಿ. ಕಡಿಮೆ ಮೌಲ್ಯದಲ್ಲಿ ಇದು ನಿಮ್ಮ ದಾವಣಗೆರೆಯಲ್ಲಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
8618642929, 08192-252228

**ಬೇಕಾಗಿದ್ದಾರೆ**
ನಗರದ ಹೆಸರಾಂತ ಬಂಗಾರದ ಅಂಗಡಿಗೆ ಸೇಲ್ಸ್ ಯುವಕರು ಮತ್ತು ಸೇಲ್ಸ್ ಯುವತಿಯರು ಬೇಕಾಗಿದ್ದಾರೆ. ಅನುಭವ ಉಳ್ಳವರಿಗೆ ಪ್ರಥಮ ಆದ್ಯತೆ. ತಿಂಗಳಿಗೆ 15,000 ರಿಂದ 20,000 ಸಂಬಳ ಕೊಡಲಾಗುವುದು.
88673 14814

**HOUSE TO-LET**
2 BHK House at 1st Floor (Veg Only)
B.T. GALLI, Sri Chowdambika devi temple Road, Davangere-577001
97392 65666

**ಬಟ್ಟೆ ಅಂಗಡಿ ಮಾರುವುದಿದೆ**
ಸುಸಜ್ಜಿತವಾದ ಹಾಲಿ ನಡೆಯುತ್ತಿರುವ ಮಹಿಳೆಯರ ಸೀರೆಗಳು, ಕುರ್ತೀಸ್, ಡ್ರೆಸ್ ಮೆಟೀರಿಯಲ್ಸ್ ಇರುವ ಬಟ್ಟೆ ಅಂಗಡಿ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99023 76642

**ಉಚಿತ ತಪಾಸಣೆ ಶಿಬಿರ**
ಮುಟ್ಟು ಪ್ರಾರಂಭದಿಂದ ಮುಟ್ಟು ನಿಂತ ಮಹಿಳೆಯರ ಆರೋಗ್ಯದಲ್ಲಿ ಬಹಳಷ್ಟು ಏರುಪೇರುಗಳು ಆಗುತ್ತವೆ. ಅದನ್ನು ಸರಿದೂಗಿಸಲು ಆಯುರ್ವೇದದ ತಜ್ಞ ವೈದ್ಯರಿಂದ ಸೂಕ್ತ ಪರಿಹಾರ ಮತ್ತು ಸಲಹೆಯನ್ನು ಪ್ರತಿ ಭಾನುವಾರ ಉಚಿತವಾಗಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
8618642929, 08192-252228

**ಸೈಟು ಮಾರಾಟಕ್ಕಿದೆ**
50×40 ಅಳತೆಯ ಪೂರ್ವ ದಿಕ್ಕಿನ ಸೈಟು ಕರಿಯಮ್ಮ ದೇವಸ್ಥಾನದ ಹತ್ತಿರ ನಿಟುವಳ್ಳಿ, ದಾವಣಗೆರೆ.
90607 90962
86608 09919

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 02.11.2021ರ ಮಂಗಳವಾರ ಮತ್ತು 03.11.2021ರ ಬುಧವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಹಿಂದಿ ಶಿಕ್ಷಕ/ಕಿ ಬೇಕಾಗಿದ್ದಾರೆ
ರಾಘವೇಂದ್ರ ವಿದ್ಯಾನಿಕೇತನ ಶಾಲೆ
ಎಸ್.ಎಸ್. ಲೇಔಟ್. ದಾವಣಗೆರೆ.
97382 03135
08192-223424

**ಮನೆ ಬಾಡಿಗೆಗೆ ಇದೆ**
2BHK ಪೂರ್ವಕ್ಕೆ ಮುಖವಾಗಿದೆ, 1ನೇ ಮಹಡಿ, ಎಸ್.ಎಸ್. ಲೇಔಟ್, ಎ.ಬ್ಲಾಕ್, 9ನೇ ಕ್ರಾಸ್, ಅಥಣಿ ಕಾಲೇಜು ಹತ್ತಿರ.
90085 26334

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**VENUS CONSULTANTS**
SN Layout 30×40 South G+F for sale.
ಖರೀದಿಸುವವರು ನೇರವಾಗಿ ಸಂಪರ್ಕಿಸಿ
90661 98752

**WANTED**
FACULTY TO TEACH
# C, C++, JAVA
# PYTHON, HTML
AND OTHER SOFTWARES
FRESHERS CAN APPLY
PH: 8217624367
DAVANGERE

**ಮನೆ ಮಾರಾಟಕ್ಕಿದೆ**
ಡಿ.ಸಿ.ಎಂ. ಟೌನ್‌ಶಿಪ್‌ನ 4ನೇ ಬಿ ಕ್ರಾಸ್‌ನಲ್ಲಿ ಕಟ್ಟಿಸಿರುವ 30x40 ಅಡಿಗಳ ಅಳತೆಯ ಶ್ರೀ ವಿನಾಯಕ ಕೃಪ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
70224 60467

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮಾರಾಟಕ್ಕೆ/ಭೋಗ್ಯಕ್ಕೆ**
ದಾವಣಗೆರೆ ನಗರದ ಹೈಟೆಕ್ ಆಸ್ಪತ್ರೆ ರಸ್ತೆ, ಜಯನಗರದಲ್ಲಿ 30×40 ಅಡಿ ಅಳತೆಯ ಮನೆ ಮಾರಾಟಕ್ಕಿದೆ. (ಬೋರ್‌ವೆಲ್, ಕಾರ್ ಪಾರ್ಕಿಂಗ್, ಕಾರ್ಪೊರೇಷನ್ ನೀರು). ಅದೇ ಕಟ್ಟಡದ 1ನೇ ಮಹಡಿ ಮನೆ ಭೋಗ್ಯಕ್ಕೆ ಇದೆ.
ವಿಚಾರಿಸಿ: 86187 39278

**BPO JOBS**
In Davanagere Required Candidate for In Bond & Out Bond process. Fluency in English, & Hindi is must.
Any Degree
Contact: 89715 64386

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಕುವೆಂಪು ನಗರ 8ನೇ ಕ್ರಾಸ್ ಪಿಸಾಳೆ ತೋಟ, ಡೋರ್ ನಂ. 3664/6ರಲ್ಲಿ 1ನೇ ಮಹಡಿಯಲ್ಲಿ 2.5 BHK ಇರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ :
ಮೊ. : 73378 61051

**ಕೆಲಸಗಾರರು ಬೇಕಾಗಿದ್ದಾರೆ**
ಗ್ಲಾಸ್ ಮತ್ತು ಪ್ಲೈವುಡ್ ಅಂಗಡಿಯಲ್ಲಿ ಅನುಭವ ಇರುವ ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
94483 76399

**HIRING TEACHERS**
Experienced Teachers are required for primary School with excellent English skills.
Subject: English & Hindi.
Contact: **EURO SCHOOL**
Opp. BIET College, Shamnur Road, Davangere. **Call: 94816 90905**

**ಬೇಕಾಗಿದ್ದಾರೆ**
ಕನ್ನಡಕ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
98861 70950
99868 86464

**ಸೈಟು ಮಾರಾಟಕ್ಕಿದೆ**
ನಿಜಲಿಂಗಪ್ಪ ಬಡಾವಣೆ (ಪಶ್ಚಿಮ) 30×35, ಕುಂದುವಾಡ ಕೆರೆ ಮೇನ್ ರೋಡ್ ಬಂಟರ ಸಮುದಾಯ ಭವನ ಎದುರು (ಕರ್ಮಷಿಯಲ್) 30×56, ಚಿಗಟೇರಿ ಬಡಾವಣೆ 30×50(ಉತ್ತರ), ರಂಗನಾಥ ಬಡಾವಣೆ 30×60(ಉತ್ತರ).
97418 11694

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
**ಮಾನಸ ಎಜುಕೇಷನ್ ಟ್ರಸ್ಟ್(ರಿ.)**
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಬೇಕಾಗಿದ್ದಾರೆ**
ಕೊರಿಯರ್ ವಿತರಿಸಲು ಬೈಕ್ ಹೊಂದಿರುವ ಎಸ್.ಎಸ್.ಎಲ್.ಸಿ ಅಥವಾ ಪಿ.ಯು.ಸಿ ಓದಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿರಿ
78925 89544

**ನವೋದಯ ಕೋಚಿಂಗ್**
5ನೇ, 8ನೇ ತರಗತಿ ವಿದ್ಯಾರ್ಥಿಗಳಿಗೆ ನವೋದಯ ಕೋಚಿಂಗ್ ದಿನಾಂಕ 30-10-21ರಿಂದ ಪ್ರಾರಂಭ
**ಸಿಂಚನ ಅಕಾಡೆಮಿ**
SBI ATM ಎದುರುಗಡೆ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ
ಸೌಮ್ಯ 85532 78258

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.Sc, B.Ed, B.Com, M.Com, M.Sc, any Degree. English Teacher's Salary: 8,000 to 10,000, Address: **Little Champs Gurukulam,** Near HKR Circle College Road Nittuvalli, Davangere
90609 06039, 98443 32559

**SSLC ಟ್ಯೂಷನ್**
@ K.B. Extn, Maths/ Science through Concept based teaching only 10 no's, per batch
9663159162, 7090542089

**ಮಳಿಗೆ ಬಾಡಿಗೆಗೆ ಇದೆ**
ಮುನ್ಸಿಪಲ್ ಸ್ಟೇಡಿಯಂ ಕಾಂಪ್ಲೆಕ್ಸ್ ಎದುರು, 2ನೇ ಮೇನ್ ಪಿ.ಜೆ. ಬಡಾವಣೆ, ದಾವಣಗೆರೆ.
97392 90066
97401 63063

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ.
M: 91108 98377

**SERVICE HOUSE FOR RENT**
Fully furnisherd house with TV, Geyser, Dining tabel, Fan, Cot, Bed, Sofa, Stand and Other Facility services
Contact: 94800 73451

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**VS PARAMEDICAL COLLEGE**
SSLC ಪಾಸ್/PUC ಪಾಸ್/ಫೇಲ್ ಆಗಿದ್ದೀರಾ ಚಿಂತಿಸಬೇಡಿ Course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
90195 80600
85532 78258

**HOUSE FOR LEASE**
2BHK 1st Floor with lift facility, Doggalli Compound. K.R Road, Near LIC Office, Davangere.
Contact: 94483 76399

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ
**ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್**
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

**WANTED**
for Dry fruits shop
**Sales Boys**
**Billing Staff** (Ladies) with computer knowledge
94484 54709
99007 08999

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಕ್ರಯ ಪತ್ರ, ಕಳೆದಿವೆ**
(1) ಕ್ರಯ ಪತ್ರದ ರಿ. ನಂ. 5185/2007-08 ಸಿಡಿ ನಂ ಡಿವಿಜಿ 78, (2) ಕ್ರಯ ಪತ್ರದ ರಿ. ನಂ-05374/2007-08 ಸಿಡಿ ನಂ ಡಿವಿಜಿ 78, (3) ಕ್ರಯ ಪತ್ರದ ರಿ.ನಂ 7750/2007-08 ಸಿಡಿ ನಂ. ಡಿವಿಜಿ 82 (4) ಕ್ರಯದ ಕರಾರು ಪತ್ರದ ರಿ.ನಂ 13719/2012-13, ಸಿಡಿ ನಂ. ಡಿವಿಜಿ 289 ನಂಬರ್ ಗಳುಳ್ಳ ಈ ನಾಲ್ಕು ಕ್ರಯಪತ್ರಗಳು ದಿನಾಂಕ 16.10.2021 ರಂದು ಬೆಳಿಗ್ಗೆ 11.30ರ ಸಮಯದಲ್ಲಿ ದಾವಣಗೆರೆ ಸಿಟಿ ಕಾಯಿ ಪೇಟೆಯಲ್ಲಿ ಹೋಗುವಾಗ ಸದರಿ ದಾಖಲೆಗಳು ಆಕಸ್ಮಿಕವಾಗಿ ಕಳೆದು ಹೋಗಿರುತ್ತವೆ. ಎಲ್ಲಾ ಕಡೆ ಹುಡುಕಿದರೂ ಸಿಕ್ಕಿರುವುದಿಲ್ಲ. ಯಾರಿಗಾದರೂ ಸಿಕ್ಕಲ್ಲಿ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಕೋರಿದೆ.
98863 99339

**ದಾಖಲೆ ಕಳೆದಿದೆ**
ದಾವಣಗೆರೆ ಎಂಸಿಸಿ ಎ.ಬ್ಲಾಕ್ ಡೋರ್ ನಂ. 2356 ವಾಸಿ **ಶ್ವೇತಾ ಆರ್. ವಿಠಲ್‌ಕರ್** ಅವರಿಗೆ ಸೇರಿದ ನೋಂದಾಯಿತ ಸೇಲ್ ಡೀಡ್ ಪತ್ರ. ನಂ.17525/2015-16 ಹಾಗೂ ನೋಂದಾಯಿತ ಸೇಲ್ ಡೀಡ್ ಪತ್ರ ನಂ. 17525/2015-16 ದಾಖಲೆಗಳು ದಿನಾಂಕ 29.10.2021ರ ಬೆಳಗ್ಗೆ 7 ಗಂಟೆಗೆ ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿ ಕಳೆದ ಹೋಗಿರುತ್ತವೆ. ಸಿಕ್ಕವರು ದಯವಿಟ್ಟು ಈ ಕೆಳಗಿನ ಮೊಬೈಲ್ ನಂಬರಿಗೆ ತಲುಪಿಸಬೇಕಾಗಿ ಕೋರುತ್ತೇನೆ.
ಮೊ: 98444 44772


## ಐನಳ್ಳಿ ಗುರುದೇವ್ ನಿಧನ



ದಾವಣಗೆರೆ ನಗರದ ಬೆಳ್ಳೂಡಿ ಗಲ್ಲಿಯ ವಾಸಿ ದಿ. ಐನಳ್ಳಿ ದೊಡ್ಡ ರುದ್ರಪ್ಪ ಅವರ ಪುತ್ರ
**ಐನಳ್ಳಿ ಗುರುದೇವ್** (60)
ಅವರು ದಿನಾಂಕ 29.10.2021ರ ಶುಕ್ರವಾರ ಬೆಳಿಗ್ಗೆ 9.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ .
ಪತ್ನಿ , ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ದಿನಾಂಕ 30.10.2021ರ ಶನಿವಾರ ಮಧ್ಯಾಹ್ನ 12.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.
**ದುಃಖತಪ್ತ ಕುಟುಂಬವರ್ಗ: ಮೊ. 94484 64382**

## ಭಾವಪೂರ್ಣ ಶ್ರದ್ಧಾಂಜಲಿ



ಡಾ. ರಾಜ್‌ಕುಮಾರ್ ಕಿರಿಯ ಪುತ್ರ,
ನಮ್ಮ ಸಮಾಜದ ಯುವ ನಾಯಕ ನಟ,
ಕರ್ನಾಟಕ ಯುವರತ್ನ
**ಪುನೀತ್ ರಾಜ್‌ಕುಮಾರ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಅಧ್ಯಕ್ಷರು ಹಾಗೂ ಪದಾಧಿಕಾರಿಗಳು,
**ದಾವಣಗೆರೆ ಜಿಲ್ಲಾ ಆರ್ಯ ಈಡಿಗ ಸಂಘ, ದಾವಣಗೆರೆ**
ಅಧ್ಯಕ್ಷರು ಹಾಗೂ ಪದಾಧಿಕಾರಿಗಳು,
**ಶ್ರೀ ರೇಣುಕಾಂಬ ಕ್ರೆಡಿಟ್ ಕೋ-ಆಪ್. ಸೊಸೈಟಿ ಲಿ., ದಾವಣಗೆರೆ.**

# ಅಗಲಿದ ಪವರ್‌ಸ್ಟಾರ್ ಪುನೀತ್‌ಗೆ ಸಂತಾಪಗಳ ಮಹಾಪೂರ


ಡಾ. ರಾಜ್ ಕುಮಾರ್ ಅಭಿಮಾನಿ ಸಂಘದಿಂದ ಪುನೀತ್‌ಗೆ ಶ್ರದ್ಧಾಂಜಲಿ


ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದಿಂದ ಪುನೀತ್ ರಾಜ್ ಕುಮಾರ್ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿತು.


ಡಾ. ರಾಜ್ ಕುಮಾರ್ ಅಭಿಮಾನಿ ಬಳಗದಿಂದ ಪುನೀತ್ ರಾಜ್‌ಕುಮಾರ್ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

## ಅಭಿಮಾನಿಗಳು, ಕನ್ನಡಪರ ಸಂಘಟನೆಗಳಿಂದ ಶ್ರದ್ಧಾಂಜಲಿ

ದಾವಣಗೆರೆ, ಅ.29- ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಗಲಿಕೆಗೆ ನಗರದಲ್ಲಿ ವರನಟ ರಾಜ್ ಕುಮಾರ್ ಅಭಿಮಾನಿಗಳು, ಪುನೀತ್ ಅಭಿಮಾನಿಗಳು ಸೇರಿದಂತೆ ಕನ್ನಡಪರ ಸಂಘಟನೆಗಳು, ರಾಜಕೀಯ ಪಕ್ಷಗಳು, ಸಾರ್ವಜನಿಕರು ಶ್ರದ್ಧಾಂಜಲಿ ಸಲ್ಲಿಸುವ ಮುಖೇನ ಕಂಬನಿ ಮಿಡಿದಿದ್ದಾರೆ.

**ರಾಜ್ ಅಭಿಮಾನಿಗಳ ನಮನ:** ಡಾ. ರಾಜ್ ಕುಮಾರ್ ಅಭಿಮಾನಿ ಸಂಘದ ವತಿಯಿಂದ ನಗರದ ಜಯದೇವ ವೃತ್ತದ ಬಳಿಯಿರುವ ಕನ್ನಡ ಧ್ವಜಸ್ತಂಭದ ಮುಂಭಾಗ ಯುವರತ್ನ ಪುನೀತ್ ರಾಜಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮೌನಾಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಮುಖಂಡ ಕೆ.ಜಿ. ಶಿವಕುಮಾರ್, ಕನ್ನಡ ಪರ ಹೋರಾಟಗಾರರಾದ ಕೆ.ಟಿ. ಗೋಪಾಲಗೌಡ, ಬಸವರಾಜ್ ಐರಣಿ, ಮಾರ್ತಾಂಡಪ್ಪ ಸೇರಿದಂತೆ ಹೋರಾಟಗಾರರು ಇದ್ದರು.

**ಕರವೇ ಶ್ರದ್ಧಾಂಜಲಿ:** ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದಿಂದ ಡಾಕ್ಟರ್ ಮೋದಿ ವೃತ್ತದ ಬಳಿ ಪುನೀತ್ ರಾಜ್ ಕುಮಾರ್ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಮಹಿಳಾ ಅಧ್ಯಕ್ಷೆ ಬಸಮ್ಮ, ಉಪಾಧ್ಯಕ್ಷೆ ಮಂಜುಳ ಮಾಂತೇಶ್, ಕಾರ್ಯದರ್ಶಿ ಮಂಜುಳಾ, ನಗರ ಘಟಕದ ಉಪಾಧ್ಯಕ್ಷ ಸಂತೋಷ್, ಜಬಿವುಲ್ಲಾ, ಭಾಷಾ ಸಾಬ್, ಮುಬಾರಕ್, ಸುರೇಶ್, ಧೀರೇಂದ್ರ, ತುಳಸಿರಾಮ್, ಕರಬಸಪ್ಪ, ವಿನಯ್, ರಾಕಿ, ನಾಗರಾಜ್ ಸೇರಿದಂತೆ ಇತರರು ಇದ್ದರು.

**ಅಭಿಮಾನಿ ಬಳಗದಿಂದ ಮೌನಾಚರಣೆ:** ಡಾ. ರಾಜ್ ಕುಮಾರ್ ಅಭಿಮಾನಿ ಬಳಗದಿಂದ ನಗರದ ಕೆ.ಟಿ. ಜಂಬಣ್ಣ ನಗರದ 13ನೇ ಕ್ರಾಸ್‌ನಲ್ಲಿರುವ ಧ್ವಜಸ್ತಂಭದ ಮುಂಭಾಗ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಒಂದು ನಿಮಿಷ ಮೌನಾಚರಿಸಿ, ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿ, ಆತ್ಮಕ್ಕೆ ಶಾಂತಿ ಕೋರಲಾಯಿತು.

ಈ ಸಂದರ್ಭದಲ್ಲಿ ರಾಜಕುಮಾರ್ ಅಭಿಮಾನಿ ಬಳಗದ ಡಿ. ಶೇಖರಪ್ಪ, ಹಿರಿಯ ಕನ್ನಡಪರ ಹೋರಾಟಗಾರ ನಾಗೇಂದ್ರ ಬಂಡೀಕರ್, ನಗರ ಪಾಲಿಕೆ ಸದಸ್ಯೆ ಯಶೋಧ ಯೋಗೇಶ್, ಕಾಂಗ್ರೆಸ್ ಮುಖಂಡ ಗೋಣೆಪ್ಪ, ಜೈ ಕರುನಾಡ ವೇದಿಕೆ ಜಿಲ್ಲಾಧ್ಯಕ್ಷ ಟಿ. ಮಂಜುನಾಥ್ ಗೌಡ, ಯುವ ಮುಖಂಡ ಜಿ. ಬಸವರಾಜ್, ಕೆ.ಟಿ. ಜಂಬಣ್ಣ ನಗರದ ನಾಗರಿಕರು ಇದ್ದರು.

**ಜಿಲ್ಲಾ ಕಾಂಗ್ರೆಸ್ ಸಂತಾಪ:** ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ಜಿಲ್ಲಾ ಕಾಂಗ್ರೆಸ್ ನಿಂದ ನಗರದ ರಾಮ್ ಅಂಡ್ ಕೋ ವೃತ್ತದಲ್ಲಿ ಮೇಣದ ಬೆಳಕು ಬೆಳಗಿಸಿ ಸಂತಾಪ ಸೂಚಿಸಲಾಯಿತು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಅನಿತಾ ಬಾಯಿ ಮಾಲತೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಕೆ.ಎಂ. ಮಂಜುನಾಥ್, ಡೋಲಿ ಚಂದ್ರು, ಡಿ. ಶಿವಕುಮಾರ್, ಕೆ.ಎಲ್. ಹರೀಶ್, ಯುವರಾಜ್, ಶ್ರೀಕಾಂತ್ ಬಂಗೇರ, ಮೊಹಮದ್ ಜಿಕ್ರಿಯ, ಚಂದ್ರಶೇಖರ್, ಗುರು ಪ್ರಸಾದ್, ಆಶಾ ಮುರಳಿ, ಕವಿತಾ ಚಂದ್ರಶೇಖರ್, ಉಮಾ ಕುಮಾರ್, ಗೀತ ಚಂದ್ರಶೇಖರ್, ಸಲ್ಮಾ ಬಾನು, ದ್ರಾಕ್ಷಾಯಣಮ್ಮ, ರಾಜೇಶ್ವರಿ, ಇಂದ್ರಮ್ಮ, ಮಂಗಳಮ್ಮ, ಮಂಜಮ್ಮ, ಗಿರಿಜಮ್ಮ, ಯಶೋಧ ಸೇರಿದಂತೆ ಇತರರು ಇದ್ದರು.


ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ಜಿಲ್ಲಾ ಕಾಂಗ್ರೆಸ್‌ನಿಂದ ಮೇಣದ ಬೆಳಕು ಮೂಡಿಸಿ ಸಂತಾಪ ಸಲ್ಲಿಸಿತು.

## ಪುನೀತ್ ಸಿಂಪ್ಲಿಸಿಟಿ ಕಂಡು ವಿಸ್ಮಿತರಾಗಿದ್ದೆವು: ವಚನಾನಂದ ಶ್ರೀ



ಕೆಲವರು ಎಷ್ಟೇ ಎತ್ತರಕ್ಕೆ ಏರಿದರೂ ಕಾಲು ನೆಲದ ಮೇಲೇ ಇರುತ್ತದೆ. ಅದು ದೊಡ್ಡವರ ಅತಿ ದೊಡ್ಡ ಗುಣ. ಹಾಗಿದ್ದವರು ಪುನೀತ್ ರಾಜಕುಮಾರ್ ಅವರು. ಸರಳತೆ ಸಜ್ಜನಿಕೆ ಅಪಾರ ಪ್ರೀತಿ ವಿನಯ ಅವರನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗಿ ನಿಲ್ಲಿಸಿತ್ತು ಎಂದು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಮಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದ್ದಾರೆ. ಹರ ಜಾತ್ರಾ ಮಹೋತ್ಸವಕ್ಕೆ ಬಂದಾಗ ಅವರ ಸಿಂಪ್ಲಿಸಿಟಿ ಕಂಡು ನಾವು ವಿಸ್ಮಿತರಾಗಿದ್ದೆವು. ಹೇಳಬೇಕೆಂದರೆ ಡಾ. ರಾಜ್ ಕುಮಾರ್ ಅವರನ್ನೇ ಹೋಲುತ್ತಿತ್ತು ಪುನೀತ್ ಅವರ ವ್ಯಕ್ತಿತ್ವ.

ಈಗ ಪುನೀತ್ ಇನ್ನಿಲ್ಲ ಅನ್ನುವುದನ್ನು ಕೇಳಿ ತೀವ್ರ ದುಃಖವಾಯಿತು. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ. ಅವರ ಕುಟುಂಬದವರಿಗೆ ಅಭಿಮಾನಿಗಳಿಗೆ ಪುನೀತ್ ಸಾವಿನ ನೋವು ಭರಿಸುವ ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವುದಾಗಿ ಅವರು ಹೇಳಿದ್ದಾರೆ.

## ಉಸ್ತುವಾರಿ ಸಚಿವರ ಸಂತಾಪ


ದಾವಣಗೆರೆ, ಅ.29- ನಟ, ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ನಿಧನಕ್ಕೆ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಸಂತಾಪ ಸೂಚಿಸಿದ್ದಾರೆ. ಕನ್ನಡದ ಮೇರು ನಟ, ವರನಟ ಡಾ. ರಾಜ್‌ಕುಮಾರ್ ಪುತ್ರರಾಗಿರುವ ಪುನೀತ್ ಅವರಿಗೆ ನಟನೆ ಎನ್ನುವುದು ರಕ್ತದಲ್ಲಿಯೇ ಬಂದಿತ್ತು. ತಂದೆ ರಾಜಕುಮಾರ್ ಮತ್ತು ತಾತ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಅವರ ಆಶೀರ್ವಾದವೇ ಪುನೀತ್‌ರನ್ನು ಪವರ್ ಸ್ಟಾರ್ ಸ್ಥಾನಕ್ಕೆ ತಂದು ನಿಲ್ಲಿಸಿತ್ತು ಎಂದರೆ ತಪ್ಪಾಗಲಾರದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಯುವ ಜನತೆಯ ಆದರ್ಶ ಹಾಗೂ ಕಣ್ಮಣಿಯಾಗಿದ್ದ ಪುನೀತ್ ರಾಜ್‌ಕುಮಾರ್ ಅವರ ಅಗಲಿಕೆ ನೋವುಂಟು ಮಾಡಿದೆ. ಪುನೀತ್ ಅಕಾಲಿಕ ಸಾವಿನಿಂದ ಕನ್ನಡ ಚಿತ್ರರಂಗಕ್ಕೆ ಭರಿಸಲಾಗದ ನಷ್ಟವಾಗಿದೆ. ಅವರ ಆತ್ಮಕ್ಕೆ ದೇವರು ಶಾಂತಿ ನೀಡಲಿ. ಅವರ ಕುಟುಂಬದ ಸದಸ್ಯರಿಗೆ ಹಾಗೂ ಅಸಂಖ್ಯಾತ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಅವರು ಪ್ರಾರ್ಥಿಸಿದ್ದಾರೆ.

## ದೀಕ್ಷಿತ್ ರಸ್ತೆ ನಾಗರಿಕರ ಶ್ರದ್ಧಾಂಜಲಿ



ದಾವಣಗೆರೆ, ಅ.29- ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅಗಲಿಕೆ ಹಿನ್ನೆಲೆಯಲ್ಲಿ ನಗರದ ಕೆ.ಬಿ. ಬಡಾವಣೆಯಲ್ಲಿನ ದೀಕ್ಷಿತ್ ರಸ್ತೆಯಲ್ಲಿ ಪುನೀತ್ ಅಭಿಮಾನಿಗಳು, ನಾಗರಿಕರು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಮೇಣದ ಬೆಳಕು ಮೂಡಿಸಿ, ಮೌನಾಚರಿಸಿ ಪುನೀತ್ ಆತ್ಮಕ್ಕೆ ಶಾಂತಿ ಕೋರಲಾಯಿತು.

## ಅಪ್ಪು ನೆನಪಲ್ಲಿ ರಾತ್ರಿಯಿಡೀ ಭಜನೆ



ದಾವಣಗೆರೆ, ಅ.29- ಪವರ್ ಸ್ಟಾರ್ ಅಪ್ಪುವಿನ ಅಭಿಮಾನದ ಅಪ್ಪುಗೆ ಸಾಗರದಂತೆ ಹರಿಯುತ್ತಿದ್ದು ಅಭಿಮಾನಿಗಳು, ಯುವ ಸಮೂಹ ಅಷ್ಟೇ ಅಲ್ಲದೇ, ಮಕ್ಕಳು ಹಾಗೂ ವಯಸ್ಸಿನ ಅಂತರವಿಲ್ಲದೇ ಜನರ ಮನ ಗೆದ್ದಿದ್ದಾರೆ ಎಂಬುದಕ್ಕೆ ಅವರ ಅಗಲಿಕೆಯ ಸಮಯದಲ್ಲಿ ಕಂಬನಿ ಮಿಡಿಯದವರೇ ಇಲ್ಲ ಎಂಬುದೇ ಸಾಕ್ಷಿಯಾಗಿದೆ.

ಪುನೀತ್ ಅಗಲಿಕೆಗೆ ಅಭಿಮಾನಿಗಳು, ಯುವಕರು, ಸಾರ್ವಜನಿಕರು, ಸಂಘಟನೆಗಳು, ರಾಜಕೀಯ ಪಕ್ಷಗಳು ಶ್ರದ್ಧಾಂಜಲಿ ಮುಖೇನ ಅಭಿಮಾನವನ್ನು ಹೊರಹಾಕುತ್ತಿವೆ. ವಿಶೇಷವೆಂದರೆ, ನಿಟ್ಟುವಳ್ಳಿಯ ಎ.ಕೆ. ಕಾಲೋನಿಯಲ್ಲಿ ಅಭಿಮಾನಿಗಳು, ಯುವಕರು, ಕಾಲೋನಿ ನಿವಾಸಿಗಳು ಇಂದು ರಾತ್ರಿ ಭಜನೆ ಆಯೋಜಿಸುವ ಮೂಲಕ ಅಪ್ಪುವನ್ನು ನೆನಪಿಸಿಕೊಳ್ಳುತ್ತಾ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಅಪ್ಪುವಿನ ಭಾವಚಿತ್ರವುಳ್ಳ ಫ್ಲೆಕ್ ಗೆ ಹಾರ ಹಾಕಿ ಅದರ ಮುಂದೆಯೇ ಇಡೀ ರಾತ್ರಿ ಭಜನೆ ಮಾಡುತ್ತಾ ಅಪ್ಪುವಿನ ಅಗಲಿಕೆಯ ನೋವನ್ನು ಅಭಿವ್ಯಕ್ತಿಪಡಿಸುತ್ತಾ ಅಭಿಮಾನದಿಂದ ಕಂಬನಿ ಸುರಿಸಿದರು.

## ಪುನೀತ್ ಫ್ಲೆಕ್ಸ್ ಮಾಡಿಸಲು ಅಭಿಮಾನಿಗಳ ದಂಡು


ಫ್ಲೆಕ್ಸ್ ಮಾಡಿಸಲು ಮುಗಿ ಬಿದ್ದಿರುವ ಅಭಿಮಾನಿಗಳು.


ನೆಚ್ಚಿನ ನಟನ ಅಗಲಿಕೆಗೆ ಅಳುತ್ತಿರುವ ಅಭಿಮಾನಿ

ದಾವಣಗೆರೆ, ಅ.29- ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅಕಾಲಿಕ ನಿಧನಕ್ಕೆ ಅಭಿಮಾನಿಗಳು ತೀವ್ರ ಶೋಕ ವ್ಯಕ್ತಪಡಿಸಿ ದೇವರನ್ನು ಶಪಿಸಿ, ಕಣ್ಣೀರು ಹಾಕಿರುವ ಘಟನೆ ನಗರದ ಕೆ.ಬಿ ಬಡಾವಣೆಯಲ್ಲಿ ನಡೆದಿದೆ.

ನೆಚ್ಚಿನ ನಟನಿಗೆ ಶ್ರದ್ಧಾಂಜಲಿ ಸಲ್ಲಿಸಲು ಕೆ.ಬಿ. ಬಡಾವಣೆಯಲ್ಲಿರುವ ಫ್ಲೆಕ್ಸ್ ಬ್ಯಾನರ್ ಶಾಪ್ ಗಳಿಗೆ ಬಂದಿದ್ದ ಪುನೀತ್ ಅಭಿಮಾನಿಗಳು, ಭಾವಚಿತ್ರ ತಯಾರಾದ ಬಳಿಕ ನೆಚ್ಚಿನ ನಟನನ್ನು ಕಂಡು ದುಃಖ ತಡೆಯಲಾಗದೇ ಗಳಗಳನೆ ಕಣ್ಣೀರು ಹಾಕಿದ್ದಾರೆ.

ಅಲ್ಲದೇ, ನಮ್ಮಂತ ಪಾಪಿಗಳನ್ನು ಬಿಟ್ಟು ಪುನೀತ್‌ನನ್ನು ಇಷ್ಟು ಬೇಗ ಯಾಕೆ ಕರೆದುಕೊಂಡೆ. ಪುನೀತ್ ಒಳ್ಳೆಯ ನಟರಾಗಿದ್ದರು, ದೇವರು ನಮಗೆ ಅನ್ಯಾಯ ಮಾಡಿದ ಎಂದು ದೇವರಿಗೆ ಶಾಪ ಹಾಕಿದರು. ಮತ್ತೊಬ್ಬ ಅಭಿಮಾನಿ ಫ್ಲೆಕ್ಸ್ ಶಾಪ್ ಮುಂದೆಯೇ ದೇವರಿಗೆ ಶಾಪ ಹಾಕುತ್ತಾ ಕಣ್ಣೀರು ಹಾಕಿ ತನ್ನ ನೋವನ್ನು ತೋಡಿಕೊಂಡಿದ್ದಾರೆ.

## ಕನ್ನಡದ ಜನಪ್ರಿಯ ನಟ ಪುನೀತ್ ರಾಜಕುಮಾರ್ ನಿಧನಕ್ಕೆ ಸಂತಾಪ

ದಾವಣಗೆರೆ, ಅ.29- ಇಂದು ನಿಧನರಾದ ಕನ್ನಡದ ಮೇರು ನಟ ಪುನೀತ್ ರಾಜಕುಮಾರ್ ನಿಧನಕ್ಕೆ ವಿವಿಧ ಸಂಘಟನೆಗಳು ತಮ್ಮ ಸಂತಾಪ ವ್ಯಕ್ತಪಡಿಸಿವೆ.

**ಬಸವರಾಜ ವಿ. ಶಿವಗಂಗಾ ಸಂತಾಪ :** ಕನ್ನಡದ ನಟ ಪುನೀತ್ ರಾಜಕುಮಾರ್ ನಿಧನಕ್ಕ ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ. ಶಿವಗಂಗಾ ಸಂತಾಪ ಸೂಚಿಸಿದ್ದಾರೆ. ಅವರ ನಿಧನದ ಸುದ್ಧಿಯಿಂದ ಆಘಾತವಾಗಿದ್ದು, ಇಡೀ ಕನ್ನಡ ಚಿತ್ರ ರಂಗವೇ ಬಡವಾಗಿದೆ ಎಂದು ಅವರು ದುಃಖ ವ್ಯಕ್ತಪಡಿಸಿದರು.

**ಫೋಟೋ ಮತ್ತು ವಿಡಿಯೋ ಗ್ರಾಫರ್ಸ್ ಸಂಘದ ಸಂತಾಪ :** ಕನ್ನಡ ಚಿತ್ರರಂಗದ ಅಪ್ರತಿಮ ನಾಯಕ ನಟ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಿಧನಕ್ಕೆ ದಾವಣಗೆರೆ ತಾಲ್ಲೂಕು ಫೋಟೋ ಮತ್ತು ವಿಡಿಯೋಗ್ರಾಫರ್ಸ್ ಸಂಘ, ಜಿಲ್ಲಾ ರವಿಚಂದ್ರನ್ ಅಭಿಮಾನಿಗಳ ಸಂಘ ಹಾಗೂ ಸಮರಸೇನೆ ಪುನೀತ್ ರಾಜಕುಮಾರ್ ಅವರು ಕನ್ನಡ ಚಿತ್ರರಂಗದ ಅದ್ಭುತ ನಟನಾಗಿದ್ದು, ಪವರ್ ಸ್ಟಾರ್ ಎಂದೇ ಖ್ಯಾತರಾಗಿದ್ದ ದೊಡ್ಡಮನೆ ಹುಡುಗ ಪುನೀತ್ ರಾಜಕುಮಾರ್ ಕನ್ನಡ ಚಿತ್ರರಂಗದಲ್ಲಿ ಅತೀ ಚಿಕ್ಕ ವಯಸ್ಸಿನಲ್ಲಿಯೇ ರಾಷ್ಟ್ರ ಪ್ರಶಸ್ತಿ ಪಡೆದು ಬಾಲ್ಯದಲ್ಲಿಯೇ ಕನ್ನಡ ಬಾವುಟ ಹಾರಿಸಿದ ವ್ಯಕ್ತಿಯಾಗಿದ್ದರು ಎಂದು ತಮ್ಮ ಸಂತಾಪ ಸಭೆಯಲ್ಲಿ ತಿಳಿಸಿದ್ದಾರೆ.

**ಡಿ. ಮುರುಗೇಶ್ ಸಂತಾಪ :** ಕನ್ನಡದ ಮೇರು ನಟ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ನಿಧನದ ಸುದ್ಧಿ ಕೇಳಿ ನಿಜಕ್ಕೂ ಒಂದು ಕ್ಷಣ ದಿಗ್ಭ್ರಮೆಯಾಗಿ ನಂಬಲು ಸಾಧ್ಯವಾಗಲಿಲ್ಲ. ಸದಾ ಹಸನ್ಮುಖಿ, ಸರಳ ಸಜ್ಜನಿಕೆಯ ಅಪರೂಪದ ವ್ಯಕ್ತಿತ್ವ, ಚಿಕ್ಕಂದಿನಿಂದಲೂ ರಾಜಕುಮಾರ್ ಹಾದಿಯಲ್ಲಿಯೇ ಬೆಳೆದು ಬಂದ ಅಪ್ರತಿಮ ನಟ ಪುನೀತ್ ಕೇವಲ ನಟನಾಗಿರಲಿಲ್ಲ, ಹಲವಾರು ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬಂದಿದ್ದು, ಇಂತಹ ಅಪರೂಪದ ವ್ಯಕ್ತಿತ್ವವನ್ನು ಕಳೆದುಕೊಂಡ ಕರುನಾಡು ಇಂದು ಅನಾಥವಾಗಿದೆ ಎಂದು ಡಿ. ಮುರುಗೇಶ್ ತಮ್ಮ ಸಂತಾಪ ವ್ಯಕ್ತಪಡಿಸಿದ್ದಾರೆ.

**ಬಾತಿ ಶಂಕರ್:** ಚಿತ್ರರಂಗದ ಕನ್ನಡದ ಕಂದ ಎಂದೇ ಕರೆಸಿಕೊಂಡಿರುವ ಪುನೀತ್ ರಾಜ್ ಅವರು ಇನಿಲ್ಲ ಎಂದು ಮನಸ್ಸಿನಲ್ಲಿ ಕಲ್ಪಿಸಲು ಸಾಧ್ಯವೇ ಇಲ್ಲ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಬಾತಿ ಶಂಕರ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ಇಷ್ಟು ಬೇಗ ಕರೆದುಕೊಳ್ಳಲೆಂದೇ ಅಷ್ಟೊಂದು ಯಶಸ್ಸು ನೀಡಿದೆಯಾ ದೇವರೇ

ದೇವರು ಕೆಲವೊಮ್ಮೆ ಎಷ್ಟೊಂದು ಕ್ರೂರಿ ಎನಿಸುತ್ತದೆ, ಸಾವು ಪ್ರತಿಯೊಬ್ಬರಿಗೂ ಬಂದೇ ಬರುತ್ತದೆ ಎಂಬುದು ಸತ್ಯವಾದರೂ... ಆ ದೇವರು ಕೆಲವೊಮ್ಮೆ ತನ್ನ ಅನಿರೀಕ್ಷಿತ ಕ್ರೂರ ದರ್ಶನ ಮಾಡಿಸಿ ಬಿಡುತ್ತಾನೆ ಎಂಬುದಕ್ಕೆ ಸಾಕ್ಷಿಯೇ ಪುನೀತ್ ರಾಜಕುಮಾರ್ ಸಾವು.

ಹೌದು ಪುನೀತ್ ರಾಜಕುಮಾರ್ ಹುಟ್ಟು ಶ್ರೀಮಂತ, ಹುಟ್ಟುತ್ತಲೇ ಕಲೆಯನ್ನು ಹೊತ್ತುಕೊಂಡು ಬಂದಂತಹ ಮಹಾನ್ ಪ್ರತಿಭಾವಂತ.

ಚಿಕ್ಕ ವಯಸ್ಸಿನಲ್ಲಿಯೇ ರಾಷ್ಟ್ರಪ್ರಶಸ್ತಿ ಪಡೆದ ಇವರು ಮುಟ್ಟಿದ್ದೆಲ್ಲ ಚಿನ್ನ... ಅಭಿನಯಿಸಿದ ಚಿತ್ರಗಳೆಲ್ಲಾ ಯಶಸ್ಸು, ಅಷ್ಟೊಂದು ಯಶಸ್ಸು ಗಳಿಸಿದರೂ ಸೀದಾ ಸಾದಾ ಮನುಷ್ಯ, ಕೋಟ್ಯಾಂತರ ಅಭಿಮಾನಿಗಳು, ಚಿತ್ರರಂಗವಾಗಲೀ ಸಾಮಾಜಿಕ ರಂಗವಾಗಲೀ ಎಲ್ಲಿಯೂ ಶತ್ರುಗಳನ್ನು ಹೊಂದಿರದ ಮಹಾನಾಯಕ ಪುನೀತ್ ರಾಜಕುಮಾರ್ ಎಂದರೆ ತಪ್ಪಾಗಲಾರದು.

ಬಹುಶಃ ದೇವರು ಇಷ್ಟು ಬೇಗ ತನ್ನತ್ತ ಇವರನ್ನು ಕರೆದುಕೊಳ್ಳಲೆಂದೇ ಇವರಿಗೆ ಇಷ್ಟು ಚಿಕ್ಕ ವಯಸ್ಸಿಗೆ ಅಷ್ಟೊಂದು ಯಶಸ್ಸು ನೀಡಿದ್ದನೇನೋ ಎಂದು ಅನ್ನಿಸುವುದು ಮಾತ್ರ ಸತ್ಯ. ಆ ದೇವರು ಪುನೀತ್ ಅವರ ಕುಟುಂಬ ವರ್ಗಕ್ಕೆ, ಅವರ ಕೋಟ್ಯಂತರ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ನೀಡಲಿ.

**- ಕೆ.ಎಲ್. ಹರೀಶ್ ಬಸಾಪುರ**

## ನಟ ಪುನೀತ್‌ಗೆ ಕಲಾಕುಂಚದಿಂದ ಸಂತಾಪ

ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ನಿಧನಕ್ಕೆ ದಾವಣಗೆರೆ ಕಲಾಕುಂಚ ಸಂಸ್ಥೆ ಪರವಾಗಿ ಗಣೇಶ್ ಶೆಣೈ ಸಂತಾಪ ಸೂಚಿಸಿದ್ದಾರೆ.

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಹಯೋಗದಲ್ಲಿ ಇಂದು ನಡೆಯಬೇಕಿದ್ದ ಕನ್ನಡ ಕುವರ-ಕುವರಿ ಮಕ್ಕಳ ಜಿಲ್ಲಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಳೆ ದಿನಾಂಕ 31ರ ಭಾನುವಾರಕ್ಕೆ ಮುಂದೂಡಲಾಗಿದೆ ಎಂದು ಅಧ್ಯಕ್ಷ ಕೆ.ಎಚ್. ಮಂಜುನಾಥ್ ತಿಳಿಸಿದ್ದಾರೆ. ಭಾನುವಾರದಂದು ನಡೆಯಬೇಕಿದ್ದ 2ನೇ ದಿನದ ಕಾರ್ಯಕ್ರಮವೂ ಕೂಡ ಅಂದೇ ನಡೆಯಲಿದೆ. ಮಾಹಿತಿಗೆ ಮೊ: 7022002517, 9448028218 ಸಂಪರ್ಕಿಸಲು ಪ್ರಧಾನ ಕಾರ್ಯದರ್ಶಿ ಜಿ.ಬಿ. ಲೋಕೇಶ್ ತಿಳಿಸಿದ್ದಾರೆ.

## ಹೊನ್ನಾಳಿ: ನಟ ಪುನೀತ್ ಕಟೌಟ್‌ಗೆ ಮಾಲಾರ್ಪಣೆ



ಹೊನ್ನಾಳಿ, ಅ.29- ಬಿಜೆಪಿ ಮುಖಂಡ ಎಂ.ಆರ್. ಮಹೇಶ್, ನಟ ಪುನೀತ್ ಸಾವಿನ ಸುದ್ದಿ ತಿಳಿದು ಹೊನ್ನಾಳಿಯಲ್ಲಿ ಸುಮಾರು ಹತ್ತು ಅಡಿ ಕಟೌಟ್‌ಗೆ ಹಾರ ಹಾಕಿ ನುಡಿಗಳ ಮೂಲಕ ಅಂತಿಮ ನಮನ ಸಲ್ಲಿಸಿದರು.

ರಾಜಕುಮಾರ್ ಕುಟುಂಬದಲ್ಲಿ ಹುಟ್ಟಿ ಇಂದಿನ ಯುವಕರಿಗೆ ಉತ್ತಮ ಪ್ರೇರಣೆ ಹಾಗು ಸಮಾಜದ ಜನತೆಗೆ ಬದುಕಿನ ಬಗ್ಗೆ ಬೆಳಕು ಚೆಲ್ಲುವ ಅನೇಕ ಚಿತ್ರಗಳಲ್ಲಿ ನಡೆಸಿದ್ದ ಪುನೀತ್ ರಾಜಕುಮಾರ್ ಕನ್ನಡಿಗರ ಹೆಮ್ಮೆಯಾಗಿ ಬದುಕಿದ್ದರೆಂದು ಹೇಳಿದರು.

ಈ ಸಂದರ್ಭದಲ್ಲಿ ಆನಂದ, ದಿಕ್ಷೀತ್, ಚಿನ್ನು, ವಿನಯ್, ಕೊಟ್ರೇಶ್, ಆಟೋ ಗುಂಡು ಇನ್ನಿತರೆ ಪುನೀತ್ ಅಭಿಮಾನಿಗಳು ಹಾಜರಿದ್ದರು.

## ವಾಲ್ಮೀಕಿ ಸಮಾಜದಿಂದ ಶ್ರದ್ಧಾಂಜಲಿ

ದಾವಣಗೆರೆ, ಅ.29- ಖ್ಯಾತ ನಟ, ಡಾ.ರಾಜ್‌ಕುಮಾರ್ ಕಿರಿಯ ಪುತ್ರ, ನಟ ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ನಾಯಕ ವಿದ್ಯಾರ್ಥಿ ನಿಲಯದ ಜಿಲ್ಲಾಧ್ಯಕ್ಷ ಬಿ.ವೀರಣ್ಣ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಪುನೀತ್ ರಾಜ್‌ಕುಮಾರ್ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ, ಅವರ ಅಗಲಿಕೆಯಿಂದ ಈ ರಾಜ್ಯದ ಅಭಿಮಾನಿಗಳಿಗೆ, ಚಿತ್ರರಂಗದವರಿಗೆ ಮತ್ತವರ ಕುಟುಂಬ ವರ್ಗಕ್ಕೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತನು ನೀಡಲಿ ಎಂದು ಜಿಲ್ಲಾ ನಾಯಕ ಸಮಾಜದ ಬಿ.ವೀರಣ್ಣ ತೀವ್ರ ಸಂತಾಪ ಸೂಚಿಸಿದ್ದಾರೆ.

## ಸಿನಿಮಾ ಸಿರಿಯಿಂದ ಅಪ್ಪುಗೆ ಶ್ರದ್ಧಾಂಜಲಿ

ದಾವಣಗೆರೆ, ಅ.29- ಖ್ಯಾತ ನಟ, ಡಾ.ರಾಜ್ ಕಿರಿಯ ಪುತ್ರ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಿಧನಕ್ಕೆ ದಾವಣಗೆರೆ ಸಿನಿಮಾ ಸಿರಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

## ಮುರುಘಾ ಶರಣರ ಸಂತಾಪ

ಪುನೀತ್ ರಾಜಕುಮಾರ್ ಅವರ ಅಕಾಲಿಕ ನಿಧನದ ಸುದ್ದಿಯು ನಾಡಿಗೆ ತೀವ್ರ ಆಘಾತವನ್ನು ತಂದಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡ ಚಿತ್ರರಂಗದಲ್ಲಿ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದ ಅವರು ವಿಭಿನ್ನ ಪ್ರತಿಭೆಯಿಂದ ಕನ್ನಡ ಚಿತ್ರರಂಗದ ಕಣ್ಮಣಿ ಆಗಿದ್ದರು. ಪುನೀತ್ ಅವರು 2017ರಲ್ಲಿ ಶ್ರೀಮಠಕ್ಕೆ ಭೇಟಿ ನೀಡಿದ್ದನ್ನು ಮತ್ತು ಬೆಂಗಳೂರು ಸೇರಿದಂತೆ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದನ್ನು ಸ್ಮರಿಸಿದ ಶರಣರು, ಅವರ ನಿಧನದಿಂದ ಚಿತ್ರೋದ್ಯಮ ಉತ್ತಮ ಕಲಾವಿದರೊಬ್ಬರನ್ನು ಕಳೆದುಕೊಂಡು ಬಡವಾಗಿದೆ. ಕುಟುಂಬ ವರ್ಗದವರಿಗೆ ಮತ್ತು ಅಪಾರ ಅಭಿಮಾನಿ ಬಳಗಕ್ಕೆ ಉಂಟಾಗಿರುವ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಬಸವಾದಿ ಪ್ರಮಥರು ಕರುಣಿಸಲಿ ಎಂದಿದ್ದಾರೆ.

## ರಂಭಾಪುರಿ ಶ್ರೀಗಳ ಸಂತಾಪ

ಬಾಳೆಹೊನ್ನೂರು, ಅ.29- ನಟ, ನಿರ್ದೇಶಕ, ಹಿನ್ನೆಲೆ ಗಾಯಕ ಪುನೀತ್ ರಾಜಕುಮಾರ್ ಅಗಲಿಕೆಗೆ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಡಾ. ರಾಜಕುಮಾರ್ ಅವರ ಕಿರಿಯ ಪುತ್ರರಾಗಿದ್ದ ಪುನೀತ್ ರಾಜಕುಮಾರ್ ಕಿರಿಯ ವಯಸ್ಸಿನಲ್ಲಿಯೇ ತಂದೆಯೊಡನೆ ಚಲನಚಿತ್ರ ರಂಗಕ್ಕೆ ಪಾದಾರ್ಪಣೆ ಮಾಡಿದವರಾಗಿದ್ದರು. ಅತ್ಯಂತ ಕ್ರಿಯಾಶೀಲ, ಉತ್ಸಾಹಿ ಪುನೀತ್, ಚಿಕ್ಕ ವಯಸ್ಸಿನಲ್ಲೇ ಹೃದಯಾಘಾತಕ್ಕೆ ಒಳಗಾಗಿ ಅಗಲಿರುವುದು ನೋವಿನ ಸಂಗತಿಯಾಗಿದೆ.

ಪರಮಾತ್ಮನು ಅವರ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಮತ್ತು ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಹಾಗೂ ಅವರ ಅಪಾರ ಅಭಿಮಾನಿಗಳಿಗೆ ನೀಡಲಿ ಎಂದು ಶ್ರೀ ರಂಭಾಪುರಿ ಜಗದ್ಗುರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

## ಮಲಬಾರ್ ಸಮೂಹದ ಸಂತಾಪ

ದಾವಣಗೆರೆ, ಅ. 29 – ಮೇರು ನಟ ಪುನೀತ್ ರಾಜ್‌ಕುಮಾರ್ ನಿಧನಕ್ಕೆ ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಪುನೀತ್ ಅವರ ಅಗಲಿಕೆ ಕನ್ನಡ ಚಿತ್ರರಂಗಕ್ಕೆ ತುಂಬಲಾರದ ನಷ್ಟ. ಅವರ ಕುಟುಂಬ ಹಾಗೂ ಅಭಿಮಾನಿಗಳಿಗೆ ಆಗಿರುವ ನೋವಿನಲ್ಲಿ ಭಾಗಿಯಾಗುವುದಾಗಿ ಅಹಮದ್ ಹೇಳಿದ್ದಾರೆ. ಮಲಬಾರ್ ಸಮೂಹದ ರಾಯಭಾರಿಯಾಗಿ ಪುನೀತ್ ಕಾರ್ಯ ನಿರ್ವಹಿಸಿದ್ದರು. ಅವರ ಸಹಭಾಗಿತ್ವ ನಮ್ಮ ಬ್ರಾಂಡ್‌ಗೆ ಅತ್ಯಂತ ಮೌಲ್ಯಯುತವಾಗಿತ್ತು ಎಂದೂ ಅವರು ಸ್ಮರಿಸಿದ್ದಾರೆ.

## ಪುನೀತ್ ನಿಧನಕ್ಕೆ ವೀರಣ್ಣ ಸಂತಾಪ

ನಟ ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ನಾಯಕ ವಿದ್ಯಾರ್ಥಿ ನಿಲಯದ ಜಿಲ್ಲಾಧ್ಯಕ್ಷ ಬಿ.ವೀರಣ್ಣ ಅವರು ಸಂತಾಪ ಸೂಚಿಸಿದ್ದಾರೆ. ಅವರ ಅಗಲಿಕೆಯಿಂದ ರಾಜ್ಯದ ಅಭಿಮಾನಿಗಳಿಗೆ, ಚಿತ್ರರಂಗದವರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತನು ನೀಡಲಿ ಎಂದು ಸೂಚಿಸಿದ್ದಾರೆ.

## 'ಜನತಾವಾಣಿ' ಸಂಪಾದಕರ ಜೊತೆ ಪುನೀತ್



'ಬೆಟ್ಟದ ಹೂವು' ಚಿತ್ರದ ಅಭಿನಯಕ್ಕೆ ರಾಷ್ಟ್ರ ಪ್ರಶಸ್ತಿ ಪಡೆದಿದ್ದ ಹಸನ್ಮುಖಿ ಪುನೀತ್, ಪುಟ್ಟ ಮಗುವನ್ನು ಎತ್ತಿಕೊಂಡಿರುವ ಅಪರೂಪದ ಛಾಯಾಚಿತ್ರ. ಹರಿಹರದಲ್ಲಿ ಸುಭಾಷ್ ಬೊಂಗಾಳೆ ನೇತೃತ್ವದಲ್ಲಿ ಜರುಗಿದ ಖಾಸಗಿ ಕಾರ್ಯಕ್ರಮದಲ್ಲಿ ಡಾ. ರಾಜ್ ಕುಟುಂಬದವರು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ 'ಜನತಾವಾಣಿ' ಪತ್ರಿಕೆಯ ಆಗಿನ ಸಂಪಾದಕರಾದ ಹೆಚ್.ಎನ್. ಷಡಾಕ್ಷರಪ್ಪನವರೂ ಸಹ ಭಾಗವಹಿಸಿದ್ದರು. ಅಲ್ಲದೆ ಹೆಚ್ಚೆನ್ನೆಸ್ ಪಕ್ಕದಲ್ಲಿ ನಿಂತಿರುವ ಬಾಲಕ ಮತ್ತ್ಯಾರು ಅಲ್ಲ, 'ಜನತಾವಾಣಿ' ಈಗಿನ ಸಂಪಾದಕ ಎಂ.ಎಸ್. ವಿಕಾಸ್.

# ವಿಜಯನಗರ ಕ್ರೆಡಿಟ್ ಸೊಸೈಟಿಗೆ 35 ಲಕ್ಷ ರೂ. ಲಾಭ

## ಸಂಘದ ಅಧ್ಯಕ್ಷ ಜೆ. ಚೆಲುವಪ್ಪ ಸಂತಸ



ದಾವಣಗೆರೆ, ಅ.29 - ನಗರದ ವಿಜಯನಗರ ಕ್ರೆಡಿಟ್ ಕೋ-ಆಪ್. ಸೊಸೈಟಿ 2020-21ನೇ ಸಾಲಿನಲ್ಲಿ 35,19,262 ರೂ. ಲಾಭ ಗಳಿಸಿ ಕೊರೊನಾ ಸಂಕಷ್ಟದ ನಡುವೆಯೂ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಸೊಸೈಟಿ ಅಧ್ಯಕ್ಷ ಜೆ.ಚೆಲುವಪ್ಪ ಸಂತಸ ವ್ಯಕ್ತಪಡಿಸಿದರು.

ಎಂ.ಸಿ.ಸಿ 'ಎ' ಬ್ಲಾಕ್‌ನ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಸೊಸೈಟಿ ಯಾವುದೇ ಸಹಕಾರಿ ಬ್ಯಾಂಕಿಗೆ ಕಡಿಮೆ ಇಲ್ಲದಂತೆ, ಉತ್ತಮ ವಹಿವಾಟು ನಡೆಸುತ್ತಿದ್ದು, ಇದಕ್ಕೆ ಆಡಳಿತ ಮಂಡಳಿ ಸದಸ್ಯರ ಸಹಕಾರ ಹಾಗೂ ಸಿಬ್ಬಂದಿ ವರ್ಗದವರ ಶ್ರಮ ಕಾರಣ ಎಂದು ಶ್ಲ್ಯಾಘಿಸಿದರು.

ಪ್ರಸಕ್ತ ಸಾಲಿನಲ್ಲಿ 3106 ಸದಸ್ಯರು ಇದ್ದು, ಸೊಸೈಟಿಯು ರೂ. 1,00,66,000 ಷೇರು ಬಂಡವಾಳ ಹೊಂದಿದೆ.

ರೂ. 18.85 ಕೋಟಿ ಠೇವಣಿ ಇದ್ದು, ರೂ.16.40 ಕೋಟಿ ಸಾಲ ನೀಡಲಾಗಿದೆ. ಮರಣ ಹೊಂದಿದ ಸಂಘದ ಸದಸ್ಯರ ಅಂತ್ಯಕ್ರಿಯೆಗೆ ನೆರವಾಗುವ ಉದ್ದೇಶದಿಂದ ಮೃತರ ವಾರಸುದಾರರಿಗೆ 4000 ರೂ. ಗಳನ್ನು ವಿತರಿಸಲಾಗುತ್ತಿದೆ. ಶಸ್ತ್ರಚಿಕಿತ್ಸೆಗೆ ಒಳಗಾದ ಸಂಘದ ಸದಸ್ಯರು ಅಗತ್ಯ ದಾಖಲೆ ನೀಡಿದಲ್ಲಿ, ಸಹಾಯ ಧನ ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಸಂಘದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಇ-ಸ್ಟಾಂಪಿಂಗ್ ವ್ಯವಸ್ಥೆ, ಸಂಘದಿಂದ ಸಾಲ ಪಡೆದ ಸದಸ್ಯರುಗಳಿಗೆ ರೂ. 20,000 ಗಳ ವಿಮೆ ಮಾಡಿಸಲಾಗುತ್ತಿದೆ ಹಾಗೂ ಸಂಘದ ಸಂಪೂರ್ಣ ವ್ಯವಹಾರವನ್ನು ಗಣಕೀಕೃತಗೊಳಿಸಲಾಗಿದೆ ಹಾಗೂ ಈ ಬಾರಿ ಷೇರುದಾರರಿಗೆ ಶೇ.14 ಡಿವಿಡೆಂಡ್ ನೀಡಲು ನಿರ್ಧರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎನ್.ಜಿ. ಮೋಹನ್, ನಿರ್ದೇಶಕರುಗಳಾದ ಜಿ.ಕೆ. ಶಿವಾನಂದ, ಹೆಚ್.ಬಿ.ಗೋಣಪ್ಪ, ಬಿ. ರಮೇಶ್ (ಪಿ.ಜೆ.), ವಿ.ಮಂಜುನಾಥ, ಎನ್. ನಿಂಗಪ್ಪ, ರಮೇಶ್.ಬಿ., ಶ್ರೀಮತಿ ಹೆಚ್.ಸಿ. ವಾಣಿ, ಶ್ರೀಮತಿ ಸುನಂದ, ಡಿ.ಬಿ.ಚಂದ್ರಪ್ಪ, ವಿಶೇಷ ಆಹ್ವಾನಿತರಾದ ಎಸ್. ರವಿಸ್ವಾಮಿ, ಶ್ರೀಮತಿ ವಂದನಾ, ಕಾರ್ಯದರ್ಶಿ ದಯಾನಂದ ದೊಡ್ಡಮನಿ ಮತ್ತಿತರರು ಉಪಸ್ಥಿತರಿದ್ದರು.

# ಕೊಂಡಜ್ಜಿಯಲ್ಲಿ ಚೆಲ್ಲು ಭತ್ತದ ಕ್ಷೇತ್ರೋತ್ಸವ



ಹರಿಹರ, ಅ.29- ಕಸಬಾ ಹೋಬಳಿ ಕೊಂಡಜ್ಜಿ ಗ್ರಾಮದಲ್ಲಿ ಕೃಷಿ ಇಲಾಖೆಯಿಂದ 75ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಚೆಲ್ಲು ಭತ್ತದ ಕ್ಷೇತ್ರೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಗ್ರಾಮ ಪಂಚಾಯ್ತಿ ಅಧ್ಯಕ್ಷ ಗಂಗಾಧರಪ್ಪ ಉದ್ಘಾಟಿಸಿದರು. ಉಪನ್ಯಾಸಕರಾಗಿ ಆಗಮಿಸಿದ್ದ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ಮಾತನಾಡಿ, ಚೆಲ್ಲು ಭತ್ತದ ಪದ್ಧತಿ ಕುರಿತು ತಿಳಿಸಿಕೊಟ್ಟರು. ಈ ಪದ್ಧತಿ ಅಳವಡಿಸಿಕೊಳ್ಳುವುದರಿಂದ ಎಕರೆಗೆ 30 ರಿಂದ 35 ಕ್ವಿಂಟಾಲ್ ಇಳುವರಿ ಪಡೆಯಬಹುದೆಂದು ರೈತರಿಗೆ ಕಿವಿಮಾತು ಹೇಳಿದರು.

ಪ್ರಗತಿಪರ ರೈತ ಹನುಮೇಶ್ ಅಂತರವಳ್ಳಿ, ಮಲ್ಲಿಕಾರ್ಜುನಪ್ಪ ಮತ್ತು ಸುಲ್ತಾನಪ್ಪರ ಹಾಲಪ್ಪ ಸಭೆಯನ್ನುದ್ದೇಶಿಸಿ ಮಾತನಾಡಿ, ರೈತರಿಗೆ ನಾಟಿ ಪದ್ಧತಿಯಲ್ಲಿ ಕೂಲಿ ಕಾರ್ಮಿಕರ ಅಭಾವದಿಂದ ಹೊರಬರಲು ಚೆಲ್ಲು ಭತ್ತ ಪದ್ದತಿಯು ಒಂದು ವರದಾನವಾಗಿದೆ. ಹಾಗೂ ಇಳುವರಿಯಲ್ಲಿ ಯಶಸ್ಸು ಕಾಣಬಹುದೆಂದು ಮಾಹಿತಿ ನೀಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಶಾಂತನಗೌಡರು, ಭದ್ರಾ ಕಾಡಾ ಸಮಿತಿ ನಿರ್ದೇಶಕ ಷಣ್ಮುಖಪ್ಪ, ಕೊಂಡಜ್ಜಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ಗಂಗಾಧರಪ್ಪ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ಎಸ್.ಪಿ. ರಾಜಶೇಖರಪ್ಪ ರೈತರಿಗೆ ಮಾಹಿತಿ ನೀಡಿದರು. ಸಹಾಯಕ ಕೃಷಿ ನಿರ್ದೇಶಕ ಹರಿಹರ ನಾರನಗೌಡ ಸ್ವಾಗತಿಸಿದರು. ಗ್ರಾ.ಪಂ. ಮಾಜಿ ಸದಸ್ಯ ವಿಶ್ವನಾಥ್ ವಂದಿಸಿದರು.

ಕಕ್ಕರಗೊಳ್ಳ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಜಿ. ಬಸವನಗೌಡ್ರು, ಕಕ್ಕರಗೊಳ್ಳ ವಿಎಸ್‌ಎಸ್‌ಎನ್ ಅಧ್ಯಕ್ಷ ಗೋಣಿವಾಡ ವೀರೇಶ್, ಕೊಂಡಜ್ಜಿ ವಿಎಸ್‌ಎಸ್‌ಎನ್ ಅಧ್ಯಕ್ಷ ಶೇಖರಪ್ಪ, ಕೊಂಡಜ್ಜಿ ಗ್ರಾ.ಪಂ. ಸದಸ್ಯ ಎಸ್. ಕುಮಾರ್, ಪ್ರಗತಿಪರ ರೈತ ಬಿ.ಜಿ. ನಿಂಗಪ್ಪ ದೀಟೂರು, ಆತ್ಮ ಉಪಯೋಜನೆ ನಿರ್ದೇಶಕ ಜಿ.ಎಂ. ಚಂದ್ರಶೇಖರಪ್ಪ, ಆತ್ಮ ಯೋಜನೆ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ಯೋಗೇಶ್ ಗೌಡ, ಸಹಾಯಕ ಕೃಷಿ ಅಧಿಕಾರಿ ಎಂ.ಎಂ. ಹುಣಸಿಕಟ್ಟಿ ಹರಿಹರ, ಕೊಂಡಜ್ಜಿ, ಕಕ್ಕರಗೊಳ್ಳ ಮತ್ತು ಇತರೆ ಗ್ರಾಮಗಳ ಪ್ರಗತಿಪರ ರೈತರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಲಿಂ. ಮಾಗನೂರು ಬಸಪ್ಪನವರ 26 ನೇ ಪುಣ್ಯಸ್ಮರಣೆ

ಮಹಾಶರಣ ಲಿಂ. ಮಾಗನೂರು ಬಸಪ್ಪನವರ 26 ನೇ ಪುಣ್ಯಸ್ಮರಣೆ ಮತ್ತು ಶರಣೆ ಲಿಂ. ಸರ್ವಮಂಗಳಮ್ಮ ಮಾಗನೂರು ಬಸಪ್ಪನವರ 13 ನೆಯ ಪುಣ್ಯಸ್ಮರಣೆ ಹಾಗೂ ಸರ್ವಶರಣ ಸಮ್ಮೇಳನ ಇಂದು ಬೆಳಿಗ್ಗೆ 9.30 ಕ್ಕೆ ನಗರದ ಮಾಗನೂರು ಬಸಪ್ಪ ಶಾಲಾ ಆವರಣದಲ್ಲಿ ನಡೆಯಲಿದೆ.

ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಅಧ್ಯಕ್ಷ ಎಂ.ಬಿ. ಚನ್ನಬಸವನಗೌಡರು ಅಧ್ಯಕ್ಷತೆ ವಹಿಸಲಿದ್ದಾರೆ. ಮಕ್ಕಳ ತಜ್ಞರಾದ ಡಾ. ಸುರೇಶ್ ಬಾಬು, ಡಾ. ಶೋಭಾ ಬಾಣಾಪುರಮಠ, ಬಿಳಿಚೋಡು ಪ್ರಗತಿಪರ ರೈತ ಜಿ.ಸಿ. ಅರುಣ್ ಕುಮಾರ್, ಕಾರ್ಗಿಲ್ ಯೋಧ ಕೆ.ಹೆಚ್. ಈಶ್ವರಪ್ಪ ಅವರನ್ನು ಸನ್ಮಾನಿಸಲಾಗುವುದು.

ಎವಿಕೆ ಕಾಲೇಜಿನ ಉಪನ್ಯಾಸಕಿ ಡಾ. ಗೀತಾ ಬಸವರಾಜ್ ನುಡಿ ನಮನ ಸಲ್ಲಿಸಲಿದ್ದಾರೆ. ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ.

## ಶಿಕ್ಷಣದಲ್ಲೂ ಮುಂದು : ಡಿಸಿ

**(1ನೇ ಪುಟದಿಂದ)** ಜಾರಿಗೆ ತಂದಿದೆ. ಕಾನೂನಿನ ಚೌಕಟ್ಟಿನಲ್ಲಿ ಮಹಿಳೆಯರಿಗಾಗಿ ಇರುವ ಕಾಯ್ದೆ ಕಾನೂನುಗಳ ಬಗ್ಗೆ ಅವರಿಗೆ ಸೂಕ್ತ ಮಾಹಿತಿ ದೊರೆಯಬೇಕು ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಕೆ.ಹೆಚ್. ವಿಜಯ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯ ಮೇಲೆ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ರೇಷ್ಮಾ ಕೌಸರ್, ಡಿಡಿಪಿಐ ಪರಮೇಶ್ವರಪ್ಪ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಜಯಪ್ರಕಾಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗಂಗಪ್ಪ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅಮಿತ್ ಬಿದರಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮಂಜಾನಾಯ್ಕ್, ಮಹಿಳಾ ಪೊಲೀಸ್ ಠಾಣೆಯ ನಿರೀಕ್ಷಕಿ ವೈ.ಎಸ್. ಶಿಲ್ಪ, ಸೀತಮ್ಮ ಬಾಲಕಿಯರ ಪ್ರೌಢಶಾಲೆಯ ಉಪಪ್ರಾಂಶುಪಾಲ ಎ.ಆರ್. ಮಂಜಪ್ಪ ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ 'ಮಾತಾಡ್ ಮಾತಾಡ್' ಕನ್ನಡ ಅಭಿಯಾನ



ಮಲೇಬೆನ್ನೂರು, ಅ.29 - ಪಟ್ಟಣದ ಸರ್ಕಾರಿ ಪಿಯು ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಮಾತಾಡ್ ಮಾತಾಡ್ ಕನ್ನಡ ಅಭಿಯಾನದಲ್ಲಿ ಕನ್ನಡ ಗೀತೆಗಳ ಸಾಮೂಹಿಕ ಗಾಯನ ನಡೆಯಿತು. ಈ ವೇಳೆ ಕನ್ನಡವನ್ನು ಕಡ್ಡಾಯವಾಗಿ ಬಳಸುವಂತೆ ವಿದ್ಯಾರ್ಥಿಗಳಿಗೆ ಸಂಕಲ್ಪ ಮಾಡಿಸಲಾಯಿತು.

ಉಪ ಪ್ರಾಚಾರ್ಯ ಸವಿತ, ಎಸ್ ಡಿಎಂಸಿ ಸದಸ್ಯ ಸದಾನಂದ ಹಾಗೂ ಬೋಧಕರು ಭಾಗವಹಿಸಿದ್ದರು .

## ನೀಟ್ ಪರೀಕ್ಷೆ ವಿರೋಧಿಸಿ ಎಸ್‌ಎಫ್‌ಐನಿಂದ ದೇಶಾದ್ಯಂತ ಪ್ರತಿಭಟನೆ




ದಾವಣಗೆರೆ, ಅ.29- ದೇಶದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇತರೆ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ರಾಷ್ಟ್ರ ಮಟ್ಟದಲ್ಲಿ ನಡೆಸುವ ನೀಟ್ ಪರೀಕ್ಷೆ ಸಂವಿಧಾನ ವಿರೋಧಿಯಾಗಿದ್ದು, ಈ ಪರೀಕ್ಷೆಯ ಮೂಲಕ ವೈದ್ಯಕೀಯ ಶಿಕ್ಷಣವನ್ನು ಕೇಂದ್ರ ಸರ್ಕಾರ ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಹುನ್ನಾರ ನಡೆಸಿದೆ. ಈ ಪರೀಕ್ಷೆಯಲ್ಲಿ ಇಂಗ್ಲಿಷ್, ಹಿಂದಿ ಭಾಷೆಯ ಅಭ್ಯರ್ಥಿಗಳೇ ಹೆಚ್ಚು ಪ್ರವೇಶ ಪಡೆಯುತ್ತಿದ್ದಾರೆ. ನೀಟ್ ಪರೀಕ್ಷೆಯಲ್ಲಿ ಗ್ರಾಮೀಣ ಪ್ರದೇಶದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ, ತಳಸಮುದಾಯದ ವಿದ್ಯಾರ್ಥಿಗಳು ಲಕ್ಷಾಂತರ ರೂಪಾಯಿ ಸುರಿಯುವ ಶ್ರೀಮಂತ, ಉನ್ನತ ಶೈಕ್ಷಣಿಕ ಸೌಲಭ್ಯವುಳ್ಳ ಅಭ್ಯರ್ಥಿಗಳ ಜೊತೆಗೆ ಪೈಪೋಟಿ ನಡೆಸಿ ಸೀಟು ಗಿಟ್ಟಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ಸಾಮಾಜಿಕ ನ್ಯಾಯ ಉಲ್ಲಂಘನೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ತಮಿಳುನಾಡು ಮತ್ತು ಇತರೆ ರಾಜ್ಯಗಳಲ್ಲಿ ಈ ನೀಟ್ ಪರೀಕ್ಷೆಯಿಂದ ಅನ್ಯಾಯಕ್ಕೊಳಗಾದ ಸುಮಾರು 22 ಜನ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಗುರಿಯಾಗಿದ್ದಾರೆ.

ನೀಟ್ ಪರೀಕ್ಷೆಯನ್ನು ರದ್ದುಗೊಳಿಸದಿದ್ದರೆ ಬಡ, ಮಧ್ಯಮ ವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕುಗಳು ಕಿತ್ತುಕೊಂಡಂತೆ ಆಗುತ್ತಿದೆ. ಆದ್ದರಿಂದ ತಮಿಳುನಾಡು, ಕೇರಳ ಮುಂತಾದ ರಾಜ್ಯಗಳು ನೀಟ್ ಪರೀಕ್ಷೆಯನ್ನು ರದ್ದುಗೊಳಿಸಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರವೂ ಕರ್ನಾಟಕ ರಾಜ್ಯದಲ್ಲಿ ಸಹ ನೀಟ್ ಪರೀಕ್ಷೆಯನ್ನು ರದ್ದುಗೊಳಿಸಿ ಎ.ಕೆ ರಾಜನ್ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್‌ಎಫ್‌ಐ ದಾವಣಗೆರೆ ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ.

## ರಾಜ್ಯೋತ್ಸವಕ್ಕೆ ಕಲಾ ತಂಡಗಳ ಮೆರಗು

ದಾವಣಗೆರೆ, ಅ.29- ಜಿಲ್ಲಾಡಳಿತದ ವತಿಯಿಂದ ಕನ್ನಡ ರಾಜ್ಯೋತ್ಸವ 2021ನ್ನು ಭುವನೇಶ್ವರಿ ಪೂಜೆ ಹಾಗೂ ಕಲಾ ತಂಡಗಳ ಮೆರವಣಿಗೆಯೊಂದಿಗೆ ನವೆಂಬರ್ 1ರ ಸೋಮವಾರ ಬೆಳಿಗ್ಗೆ 8.30 ಕ್ಕೆ ಸರ್ಕಾರಿ ಹೈಸ್ಕೂಲ್ ಮೈದಾನದಿಂದ ಪ್ರಾರಂಭಿಸಲಾಗುವುದು.

ಮೆರವಣಿಗೆಯು ಮಹಾನಗರಪಾಲಿಕೆ ಮುಂಭಾಗದಿಂದ ಗಾಂಧಿ ವೃತ್ತ, ಅಶೋಕ ರಸ್ತೆ, ಜಯದೇವ ವೃತ್ತ, ವಿದ್ಯಾರ್ಥಿ ಭವನದ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣದವರೆಗೆ ಸಾಗಲಿದೆ. ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಧ್ವಜಾರೋಹಣ ಹಾಗೂ ರಾಜ್ಯೋತ್ಸವದ ಸಂದೇಶವನ್ನು ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ನೆರವೇರಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು.

ಸಂಸದ ಡಾ. ಜಿ.ಎಂ. ಸಿದ್ದೇಶ್ವರ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಶಾಸಕರು, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿ. ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ, ಶಾಸಕರು ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ, ಶಾಸಕ ಹಾಗೂ ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿ. ಅಧ್ಯಕ್ಷ ಪ್ರೊ. ಎನ್. ಲಿಂಗಣ್ಣ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಜಿ.ರಘು ಆಚಾರ್, ಆರ್. ಪ್ರಸನ್ನ ಕುಮಾರ್, ಲೇಹರ್‌ಸಿಂಗ್ ಸಿರೋಯಾ, ಮೋಹನ್ ಕುಮಾರ್ ಕೊಂಡಜ್ಜಿ, ಎಸ್. ರಾಮಪ್ಪ, ಕೆ.ಪಿ. ನಂಜುಂಡಿ ವಿಶ್ವಕರ್ಮ, ರವಿಕುಮಾರ್. ಎನ್. ತೇಜಸ್ವಿನಿ ಗೌಡ, ಆಯನೂರು ಮಂಜುನಾಥ್, ಎಸ್. ಎಲ್. ಭೋಜೇಗೌಡ, ವೈ.ಎ. ನಾರಾಯಣಸ್ವಾಮಿ, ಚಿದಾನಂದ ಎಂ. ಗೌಡ, ಆರ್. ಶಂಕರ್ ಹಾಗೂ ಮಹಾಪೌರ ಎಸ್.ಟಿ.ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಭಾಗವಹಿಸುವರು.

## ನಗರದಲ್ಲಿ ಇಂದು ಜಿಲ್ಲಾ ಮಟ್ಟದ ಸಭೆ

ದಮನಿತ ಮಹಿಳೆಯರ ಜೀವನ ಮಟ್ಟವನ್ನು ಸಮಗ್ರವಾಗಿ ಸುಧಾರಿಸಲು ವಿವಿಧ ಇಲಾಖೆಗಳ ಮಧ್ಯೆ ಸಮನ್ವಯತೆ ಮತ್ತು ಯೋಜನೆಗಳ ಅನುಷ್ಠಾನಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಲು ಅಲ್ಲದೆ ಟ್ರಾನ್ಸ್‌ಜೆಂಡರ್ ಅವರಿಗೆ ಸೌಲಭ್ಯಗಳನ್ನು ಒದಗಿಸುವ ಸಂಬಂಧ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆ ಇಂದು ಬೆಳಿಗ್ಗೆ 11 ಕ್ಕೆ ಡಿಸಿ ಕಚೇರಿಯಲ್ಲಿ ಸಭೆ ನಡೆಯಲಿದೆ. ಅಧ್ಯಕ್ಷತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ವಹಿಸುವರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಂಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು. ಎಸ್.ಟಿ.ಪಿ. ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು. ಭಾಷಾನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾವುಲ್ಲಾ ಮುಸ್ತಾಫ ನಗರ, ರಜಾಕ್ ಸರ್ಕಲ್, ಭಾಷಾನಗರ ಮುಖ್ಯರಸ್ತೆ, ಸುತ್ತಮುತ್ತ ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ್ ನಗರ, ಇಎಸ್‌ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷಾನಗರ ಮುಖ್ಯರಸ್ತೆ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಸಭೆ ಮುಂದೂಡಿ ಪುನೀತ್‌ಗೆ ಶ್ರದ್ಧಾಂಜಲಿ

**ಹೊನ್ನಾಳಿ**

ಹೊನ್ನಾಳಿ, ಅ.29- ತಾಲ್ಲೂಕಿನ ಶರಣ ಸಾಹಿತ್ಯ ಪರಿಷತ್‌ನ ಪೂರ್ಣ ಸಮಿತಿ ರಚನೆಯ ಪದಾಧಿಕಾರಿಗಳ ಆಯ್ಕೆಗಾಗಿ ನೂತನ ಅಧ್ಯಕ್ಷರಾಗಿದ್ದ ಕೆ.ಪಿ. ದೇವೇಂದ್ರಯ್ಯನವರ ಅಧ್ಯಕ್ಷತೆಯಲ್ಲಿ ಹೊಸ ಸಂಪದ ಕಛೇರಿಯ ಲ್ಲಿಂದು ಸಭೆ ಕರೆಯಲಾಗಿದ್ದು, ನಟ ಪುನೀತ್ ನಿಧನದ ಹಿನ್ನೆಲೆಯಲ್ಲಿ ಸಭೆಯನ್ನು ಮುಂದೂಡಲಾಯಿತು. ಪುನೀತ್ ಅವರ ಸಾವಿನ ವಿಷಯವನ್ನು ತಿಳಿದು ಪರಿಷತ್ ಉದ್ಘಾಟನಾ ಸಮಾರಂಭದ ಪೂರ್ವಭಾವಿ ಸಭೆಯ ವಿಷ ಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸೋಣವೆಂದು ಸಭೆ ಮುಂದೂಡಲಾಯಿತು. ಅಕಾಲಿಕ ಮರಣ ಹೊಂದಿದ ಪುನೀತ್ ಅವರಿಗೆ ನುಡಿ ನಮನದ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಾಹಿತಿ ಸಂಗನಾಳ್ ಮಠ್, ಕಡದಕಟ್ಟೆ ತಿಮ್ಮಣ್ಣ, ಸಿದ್ಧಯ್ಯ, ಮುರುಗೇಂದ್ರಯ್ಯ, ಗೊಲ್ಲರಹಳ್ಳಿ ಮಂಜುನಾಥ್, ಧನಂಜಯಪ್ಪ, ಮೃತ್ಯುಂಜಯ ಪಾಟೀಲ್, ಶಹಜಾನ್, ಹೇಮಲತಾ, ಸುನಂದ ಇನ್ನಿತರರಿದ್ದರು.

## ಇಂದು 'ಸುರಕ್ಷಾ ದೀಪಾವಳಿ' ಅಭಿಯಾನ

ಪರಿಸರ ಸಂರಕ್ಷಣಾ ವೇದಿಕೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ ಹಾಗೂ ಅಮೃತ ಯುವಕ ಸಂಘ, ಅಮೃತನಗರ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಗರದ ಶಿವಕುಮಾರಸ್ವಾಮಿ ಬಡಾವಣೆಯ ಸೇಂಟ್ ಜಾನ್ಸ್ ಪ್ರೌಢಶಾಲೆಯಲ್ಲಿ 'ಸುರಕ್ಷಾ ದೀಪಾವಳಿ' ಜಾಗೃತಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ವಿಜ್ಞಾನ ಪರಿಷತ್ ಗೌರವಾಧ್ಯಕ್ಷ ಡಾ. ಜೆ.ಬಿ. ರಾಜು ಕಾರ್ಯಕ್ರಮ ಉದ್ಘಾಟಿಸುವರು. ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಡಾ. ಚಂದ್ರಶೇಖರ್ ಸುಂಕದ್, ಉಪ ಪರಿಸರ ಅಧಿಕಾರಿ ಬಿ.ಕೆ. ಸಂತೋಷ್, ಸೇಂಟ್ ಜಾನ್ಸ್ ಕಾನ್ವೆಂಟ್ ಪ್ರಾಂಶುಪಾಲರಾದ ಜ್ಯೋತಿ ಎನ್. ಉಪಾಧ್ಯಾಯ ಭಾಗವಹಿಸಲಿದ್ದು, ಸೇಂಟ್ ಜಾನ್ಸ್ (ಸಿಬಿಎಸ್‌ಇ) ಕಾನ್ವೆಂಟ್ ಪ್ರಾಂಶುಪಾಲ ವಿ.ಎನ್. ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ.

## ನಾಳೆ ರಾಜ್ಯ ವೇಯ್ಟ್ ಲಿಫ್ಟಿಂಗ್ ಸ್ಪರ್ಧೆ

ದಾವಣಗೆರೆ, ಅ. 29- ಕರ್ನಾಟಕ ರಾಜ್ಯ ವ್ಹೇಟ್ ಲಿಫ್ಟರ್ಸ್ ಅಸೋಸಿಯೇಷನ್, ದಾವಣಗೆರೆ ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 31 ಹಾಗೂ ನ.1 ರಂದು ಎರಡು ದಿನಗಳ ಕಾಲ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ 3 ನೇ ಬಾರಿ ರಾಜ್ಯಮಟ್ಟದ ಹಿರಿಯರ ಮತ್ತು ಕಿರಿಯರ, ಮಹಿಳೆಯರ ಮತ್ತು ಪುರುಷರ ಹಾಗೂ ಬಾಲಕ, ಬಾಲಕೀಯರ ವೇಟ್ ಲಿಫ್ಟಿಂಗ್ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಗೌರವಾಧ್ಯಕ್ಷ ಕೆ.ಎಂ. ವೀರೇಶ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸುವರು. ವಿಶೇಷ ಆಹ್ವಾನಿತರಾಗಿ ಸಚಿವ ಕೆ.ಸಿ. ನಾರಾಯಣಗೌಡ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಆಗಮಿಸಲಿದ್ದು, ತಮ್ಮ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಮೇಯರ್ ಅಜಯ್ ಕುಮಾರ್, ಬಿಜೆಪಿ ಮುಖಂಡ ಯಶವಂತರಾವ್ ಜಾಧವ್, ಜಿ.ಎಸ್. ಅನಿತ್ ಕುಮಾರ್, ಉಪ ಮೇಯರ್ ಶಿಲ್ಪಾ ಜಯಪ್ರಕಾಶ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ನ. 1 ರಂದು ಸಂಜೆ 4.30 ಕ್ಕೆ ಸಮಾರೋಪ ಹಾಗೂ ಬಹುಮಾನ ವಿತರಣೆ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಡಾ.ಜಿ.ಎಂ. ಸಿದ್ಧೇಶ್ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

ಜಿಲ್ಲಾ ವೇಟ್ ಲಿಫ್ಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಹೆಚ್. ಮಹೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ.ಮುದಜ್ಜಿ, ಡಾ. ಮಹೇಶ್, ಡಾ. ರುದ್ರಮುನಿ, ಡಾ. ನಿಜಲಿಂಗಪ್ಪ ಕಾಳಪ್ಪನವರ್, ಹೆಚ್.ಆರ್. ಅಶೋಕ ರೆಡ್ಡಿ ಸೇರಿದಂತೆ ಅನೇಕ ಗಣ್ಯರು ಆಗಮಿಸಲಿದ್ದಾರೆ ಎಂದು ವಿವರಿಸಿದರು.

ಸಮಾರಂಭದಲ್ಲಿ ಗಡಿ ಭದ್ರತಾ ಪಡೆ ಯೋಧ ಆರ್. ಹನುಮಂತಪ್ಪ, ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಷನ್ ಸೆಕ್ರಟರಿ ಜನರಲ್ ಎಸ್.ಹೆಚ್. ಆನಂದಗೌಡ, ಖಜಾಂಚಿ ಶ್ಯಾಮಲ ಶೆಟ್ಟಿ ಅವರನ್ನು ಸನ್ಮಾನಿಸಲಾಗುವುದು ಎಂದರು.

ಸುಮಾರು 400 ರಿಂದ 500 ಕ್ರೀಡಾಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು, 25 ಜನ ತೀರ್ಪುಗಾರರು ಆಗಮಿಸಲಿದ್ದಾರೆ. ಮಹಿಳೆಯರು ಮತ್ತು ಪುರುಷರ ಸ್ಪರ್ಧೆಗಳು ಪ್ರತ್ಯೇಕವಾಗಿ ಎರಡು ವೇದಿಕೆಗಳಲ್ಲಿ ನಡೆಯಲಿವೆ. ಈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದವರು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುತ್ತಾರೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಪದಾಧಿಕಾರಿಗಳಾದ ಹೆಚ್. ಮಹೇಶ್, ಬಿ.ಎನ್. ಕರಿಬಸವರಾಜು, ಹೆಚ್. ಬಸವರಾಜ್, ಎನ್. ಹನುಮಂತಪ್ಪ, ಎಸ್. ರಾಘವೇಂದ್ರ, ಸಂತೋಷ್ ಕುಮಾರ್ ಕಾಟೆ, ಸಿದ್ದೇಶ್, ನವೀನ್ ಮತ್ತಿತರರು ಉಪಸ್ಥಿತರಿದ್ದರು.

## ಕಾರು ಅಡವಿಟ್ಟು ವಂಚನೆ

### ಓರ್ವನ ಬಂಧನ



**(1ನೇ ಪುಟದಿಂದ)** ಕೆಟಿಜೆ ನಗರ ವೃತ್ತ ನಿರೀಕ್ಷಕ ಹೆಚ್. ಗುರುಬಸವರಾಜ ಮಾರ್ಗದರ್ಶನದಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆಯ ಪಿಎಸ್ ಐ ಪ್ರಭು ಡಿ. ಕೆಳಗಿನಮನಿ, ಅಬ್ದುಲ್ ಖಾದರ್ ಜಿಲಾನಿ ಹಾಗೂ ಸಿಬ್ಬಂದಿಗಳಾದ ಶಂಕರ್ ಜಾಧವ್, ಟಿ. ಪ್ರಕಾಶ, ಷಣ್ಮುಖ, ಎಮ್. ಮಂಜಪ್ಪ, ಗಿರೀಶ ಗೌಡ, ರಾಘವೇಂದ್ರ, ಶಾಂತಕುಮಾರ ಒಳಗೊಂಡ ತಂಡವು ಪ್ರಕರಣದ ಎ2 ಆರೋಪಿಯನ್ನು ಬಂಧಿಸಿದ್ದಾರೆ. ಪ್ರಕರಣ ಪ್ರಮುಖ ಆರೋಪಿ ಅರ್ಜುನ ನಿಟ್ಟುವಳ್ಳಿ ಈತನ ಬಂಧನಕ್ಕೆ ಬಲೆ ಬೀಸಲಾಗಿದೆ.

## ಹರಪನಹಳ್ಳಿ : ಹೈಕಮಾಂಡ್‌ಗೆ ವರದಿ ಒಪ್ಪಿಸಿದ ಎಂ.ಪಿ. ವೀಣಾ



ಹರಪನಹಳ್ಳಿ, ಅ.29- ಕೆಪಿಸಿಸಿ ನೀಡಿದ ಚುನಾವಣಾ ವೀಕ್ಷಕಿ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವ ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ. ವೀಣಾ ಮಹಾಂತೇಶ್, ಹೈಕಮಾಂಡ್‌ಗೆ ವರದಿ ಒಪ್ಪಿಸಿದರು.

ಸಿಂಧಗಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ಅವರ ಪರ ಪ್ರಚಾರದ ಮಾಹಿತಿ ಪಡೆಯಲು ಕಾರ್ಯಕರ್ತರು, ಮುಖಂಡರನ್ನು ಒಗ್ಗೂಡಿಸಿ ಪ್ರಚಾರವನ್ನು ಹಮ್ಮಿಕೊಳ್ಳಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಜವಾಬ್ದಾರಿ ನೀಡಿತ್ತು. ವರದಿಯನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಹಾಗೂ ಚುನಾವಣೆ ಉಸ್ತುವಾರಿ ಯು.ಟಿ. ಖಾದರ್ ಅವರಿಗೆ ಸಲ್ಲಿಸಿದರು. ಉಭಯ ನಾಯಕರು ವೀಣಾ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಜಿಎಂಎಚ್ ಪಿಯುನಲ್ಲಿ ಅತ್ಯುತ್ತಮ ನಾಯಕತ್ವ ಪ್ರಶಸ್ತಿ ಸಮಾರಂಭ

ದಾವಣಗೆರೆ, ಅ.29- ನಗರದ ಪ್ರತಿಷ್ಠಿತ ಜಿಎಂಎಚ್ ಪಿಯುನಲ್ಲಿ ದಿ ಅತ್ಯುತ್ತಮ ನಾಯಕತ್ವ ಪ್ರಶಸ್ತಿ ಸಮಾರಂಭವನ್ನು ರಾಜ್ಯ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಉದ್ಘಾಟಿಸಿದರು.

ಸಮಾರಂಭದಲ್ಲಿ ಅತ್ಯುತ್ತಮ ಶಿಕ್ಷಕರುಗಳಿಗೆ ಮತ್ತು ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡುವುದರ ಮೂಲಕ ಗೌರವ ಸೂಚಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಿಕ್ಷಣ ಸಚಿವ ನಾಗೇಶ್, ಇದೊಂದು ವಿನೂತನ ಕಾರ್ಯಕ್ರಮವಾಗಿದ್ದು, ಈ ಪ್ರಶಸ್ತಿಗಳ ಮೂಲಕ ಅತ್ಯುತ್ತಮ ಶಿಕ್ಷಕರುಗಳು ಮತ್ತು ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೇರಣೆ ತುಂಬಲಿದೆ ಎಂದು ಶ್ಲ್ಯಾಘಿಸಿದರು.

ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಂತರ ಕೆಎಎಸ್ ಪರೀಕ್ಷೆ ಬರೆದು, ಹೆಚ್ಚು ಅಂಕ ಗಳಿಸಿ, ಇಂದು ದಾವಣಗೆರೆ ಜಿಲ್ಲೆಯ ಉಪ ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದು, ತಮ್ಮೆಲ್ಲರಿಗೆ ಇವರು ಮಾದರಿಯಾಗಿದ್ದಾರೆ ಎಂದು ಸಚಿವರು ತಿಳಿಸಿದರು.




ಅತಿ ಹೆಚ್ಚು ಅಂಕ ಗಳಿಸಿದ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಹೆಚ್. ಶ್ವೇತಾ, ರುಮನ್ ಮಲ್ಲಿಕ್, ಯು.ಆರ್. ಭಾಗ್ಯ, ವಾಣಿಜ್ಯ ವಿಭಾಗದಿಂದ ಕರಣ್ ಎ. ಕಲಾಲ್, ಆರ್.ಪಿ. ಪವಿತ್ರ, ಎನ್.ಆರ್. ಕಾವ್ಯ ಇವರುಗಳಿಗೆ ಪ್ರಶಸ್ತಿ ವಿತರಿಸಲಾಯಿತು. ಹಾಗೆಯೇ ಸಿಇಟಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ವಿ. ಸಂತೋಷಿನಿ, ಶ್ವೇತಾ ಹೆಚ್, ರುಮನ್ ಮಲ್ಲಿಕ್ ಮತ್ತು ಜೆಇಇ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ತೌಸಿಫ್, ವಿಶೃತ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರುಗಳಿಗೂ ಇದೇ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಂತರ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಟ್ಟರು.

ಜಿ.ಎಂ. ಸಮೂಹ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರುಗಳಾದ ಜಿ.ಎಸ್. ಅನೀತ್ ಕುಮಾರ್, ಜಿಎಂಎಚ್ ಪಿಯು ಕಾಲೇಜು ಪ್ರಾಂಶುಪಾಲ ಡಾ. ವಿ. ವೆಂಕಟರಾಯುಡು, ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ, ದಾವಣಗೆರೆ ಉತ್ತರ ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಕೊಟ್ರೇಶ್, ದಾವಣಗೆರೆ ದಕ್ಷಿಣ ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನ್ ಮೂರ್ತಿ, ಡಯಟ್ ಪ್ರಾಂಶುಪಾಲ ಲಿಂಗರಾಜ್, ಜಿಎಂಎಸ್ ಡಿಗ್ರಿ ಕಾಲೇಜು ಪ್ರಾಂಶುಪಾಲೆ ಶ್ವೇತ ಮರಿಗೌಡರ್ ಮತ್ತು ಹಲವು ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಅಪ್ಪಾಜಿ ಅಪ್ಪುಗೆ...

ರಾಜಕುಮಾರ್ ಪಾರ್ವತಮ್ಮರ
ಬಾಳಲ್ಲಿ ವಸಂತ ಗೀತೆಯಾಡಲು
ಪ್ರೇಮದ ಕಾಣಿಕೆಯ ರೂಪವಾಗಿ
ಭೂಮಿಗಿಳಿದ ಭಗವಂತನಾದ.



ಶಿವಣ್ಣ ರಾಘಣ್ಣ
ಪೂರ್ಣಿಮಾರ
ಸೋದರ ವಾತ್ಸಲ್ಯ ಪಡೆದ
ಲೋಹಿತ
ಚಲಿಸುವ ಮೋಡಗಳಲ್ಲಿ
ಎರಡು ನಕ್ಷತ್ರಗಳ
ನೋಡುತ ಬೆಟ್ಟದ ಹೂ ತಂದ ಪುನೀತ.

ವೀರ ಕನ್ನಡಿಗಾಗಿ ಆಕಾಶದೆತ್ತರಕ್ಕೆ ಬೆಳೆದು
ನಮ್ಮ ಬಸವನೊಡನೆ ಪೃಥ್ವಿಯ ಸುತ್ತಿ ಬಂದೆ
ಅಜಯ್ ರಾಮ್ ಜಾಕಿ ಮೈತ್ರಿ ಅಣ್ಣ ಬಾಂಡ್
ಯಾರೇ ಕೂಗಾಡಲಿ ಹೋಗ್ಲಿ ಬಿಡು ಎಂದೆ.

ರಣ ವಿಕ್ರಮ ಮೌರ್ಯನಾಗಿ ಚಕ್ರವ್ಯೂಹ ಬೇಧಿಸಿ
ಕಲಾಭಿಮಾನಿಗಳ ರಂಜಿಸಿ ಪವರ್ ಸ್ಟಾರ್ ಆದೆ
ನೃತ್ಯ ನಟನೆ ಗಾಯನದಲ್ಲಿ ಸಾರ್ವಭೌಮನಾಗಿ
ದೊಡ್ಮನೆಗೆ ರಾಜಕುಮಾರ ಯುವರತ್ನನೆನಿಸಿದೆ.

ಲಕ್ಷಾಂತರ ಜೀವಗಳಿಗೆ ಜೀವನಾಶ್ರಯವ ನೀಡುತ
ಫ್ಯಾಮಿಲಿ ಪವರ್ ಕಾಳಜಿಯ ತೋರಿದ ಅಧಿಪತಿ
ನೂರಾರು ಪಾತ್ರಗಳ ಲೀಲಾಜಾಲವಾಗಿ ಅಭಿನಯಿಸಿ
ಕೋಟ್ಯಂತರ ಅಭಿಮಾನಿಗಳ ಪಡೆದ ಕೋಟ್ಯಾಧಿಪತಿ.

ಭಕ್ತಿಯಲ್ಲಿ ಪ್ರಹ್ಲಾದ, ಅಂಜನಿ ಪುತ್ರನಾಗಿ
ಶಕ್ತಿಯಲ್ಲಿ ಪರಶುರಾಮನಾಗಿ ಕಂಗೊಳಿಸಿ
ಬಿಂದಾಸ್ ಹುಡುಗರ ಜೊತೆ ಅರಸನಾಗಿ ಬಾಳದೆ
ಅಪ್ಪಾಜಿ ಅಪ್ಪುಗೆಯ ಮಿಲನಕ್ಕೆ ಆತುರದಿ ತೆರಳಿದೆ.

- **ಶಿವಮೂರ್ತಿ.ಹೆಚ್.** ಕನ್ನಡ ಶಿಕ್ಷಕರು
ಶ್ರೀ ತರಳಬಾಳು ಸೆಂಟ್ರಲ್ ಸ್ಕೂಲ್
ಅನುಭವ ಮಂಟಪ, ದಾವಣಗೆರೆ.

## ಭ್ರಷ್ಟರಿಗೆ ಅಧಿಕಾರ; ಜನರಿಗೆ ಸಂಕಷ್ಟ



**(1ನೇ ಪುಟದಿಂದ)** ಮಾಡುವುದಾಗಿ ಭರವಸೆ ನೀಡಿದ್ದರು. ಆದರೆ, ಉದ್ಯೋಗ ಸೃಷ್ಟಿಸುವುದು ಇರಲಿ ಇರುವ ಉದ್ಯೋಗವನ್ನು ಕಿತ್ತುಕೊಂಡು ಯುವಜನರು, ದುಡಿಯುವ ವರ್ಗದ ಜನರನ್ನು ಬೀದಿ ಪಾಲು ಮಾಡಿದ್ದಾರೆಂದು ಕಿಡಿಕಾರಿದರು.

ಕಾರ್ಯಕ್ರಮದಲ್ಲಿ ಸಿಪಿಎಂ ರಾಜ್ಯ ಸಮಿತಿ ಸದಸ್ಯ ಮುಜೀಬ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಟಿ.ವಿ. ರೇಣುಕಮ್ಮ, ಪಕ್ಷದ ಮುಖಂಡರಾದ ಕೆ.ಹೆಚ್. ಆನಂದರಾಜು, ಇ. ಶ್ರೀನಿವಾಸ್, ಶ್ರೀನಿವಾಸಮೂರ್ತಿ, ಹುಲಿಕಟ್ಟೆ ರಹಮತ್, ಭರಮಪ್ಪ ಸೇರಿದಂತೆ ಇತರರು ಇದ್ದರು.

## ಆತ್ಮಹತ್ಯೆ : ರಾಜ್ಯಕ್ಕೆ ಐದನೇ ಸ್ಥಾನ

**(1ನೇ ಪುಟದಿಂದ)** ಆತ್ಮಹತ್ಯೆಗಳು ಕಂಡು ಬಂದಿವೆ. ದೇಶದ ಉಳಿದ 23 ರಾಜ್ಯಗಳು ಹಾಗೂ ಎಂಟು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆತ್ಮಹತ್ಯೆ ಪ್ರಮಾಣ ಶೇ.49.9ರಷ್ಟಾಗಿದೆ ಎಂದು ಎನ್.ಸಿ.ಆರ್.ಬಿ. ಹೇಳಿದೆ.

ದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರ ಪ್ರದೇಶದಲ್ಲಿ ಆತ್ಮಹತ್ಯೆ ಪ್ರಮಾಣ ಕಡಿಮೆ ಇದೆ. ಉತ್ತರ ಪ್ರದೇಶ, ದೇಶದ ಶೇ.16.9ರಷ್ಟು ಜನಸಂಖ್ಯೆ ಹೊಂದಿದೆ. ಆತ್ಮಹತ್ಯೆಗಳ ಪ್ರಮಾಣ ಶೇ.3.1ರಷ್ಟಾಗಿದೆ. ಕೇಂದ್ರಾಡಳಿತ ಪ್ರದೇಶವಾದ ದೆಹಲಿಯಲ್ಲಿ 3,142 ಆತ್ಮಹತ್ಯೆಗಳು ಸಂಭವಿಸಿವೆ. ಪುದುಚೆರಿಯಲ್ಲಿ 408 ಆತ್ಮಹತ್ಯೆಗಳು ದಾಖಲಾಗಿವೆ.

ದೇಶದ 53 ಮಹಾನಗರಗಳಲ್ಲಿ 23,855 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾನಗರಗಳಲ್ಲಿ ಆತ್ಮಹತ್ಯೆ ದರ ದೇಶದ ಸರಾಸರಿಗಿಂತ ಹೆಚ್ಚಾಗಿದೆ. ದೇಶದ ಸರಾಸರಿ ಆತ್ಮಹತ್ಯೆ ದರ ಲಕ್ಷಕ್ಕೆ 11.3 ಆಗಿದ್ದರೆ, ಮಹಾನಗರಗಳಲ್ಲಿ 14.8 ಆಗಿದೆ. ಕೌಟುಂಬಿಕ ಸಮಸ್ಯೆಯೇ ಆತ್ಮಹತ್ಯೆಗೆ ಅತಿ ದೊಡ್ಡ ಕಾರಣವಾಗಿದೆ. ಶೇ.33.6ರಷ್ಟು ಆತ್ಮಹತ್ಯೆಗಳಿಗೆ ಕೌಟುಂಬಿಕ ಸಮಸ್ಯೆಯೇ ಕಾರಣ. ಮದುವೆ ಸಂಬಂಧಿತ ಸಮಸ್ಯೆಗಳಿಂದ ಶೇ.5, ರೋಗಗಳಿಂದ, ಶೇ.18ರಷ್ಟು ಜನರು ಸಾವನ್ನಪ್ಪಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪುರುಷರ ಪ್ರಮಾಣ ಶೇ.70.9 ಹಾಗೂ ಮಹಿಳೆಯರ ಪ್ರಮಾಣ ಶೇ.29.1ರಷ್ಟಿದೆ.

# ಸಂಭ್ರಮದ ಕನ್ನಡದ ಹಬ್ಬ ಆಚರಣೆಗೆ ನಿರ್ಧಾರ

ದಾವಣಗೆರೆ, ಅ.29- ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷ ಕರ್ನಾಟಕ ರಾಜ್ಯೋತ್ಸವ ಆಚರಣೆ ಸಾಧ್ಯವಾಗಿಲ್ಲ. ಆದ್ದರಿಂದ ಈ ಬಾರಿಯ 66ನೇ ಕನ್ನಡ ರಾಜ್ಯೋತ್ಸವವನ್ನು ಕಳೆದ ಅನೇಕ ವರ್ಷಗಳಿಂದ ನಡೆಸಿಕೊಂಡು ಬಂದಂತೆ, ಹಿರಿಯರ ಮಾರ್ಗದರ್ಶನ ದಲ್ಲಿ ಅದ್ಧೂರಿಯಾಗಿ ಆಚರಿಸೋಣ ಎಂದು ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ತಿಳಿಸಿದರು.

ನಗರದ ನಗರ ಪಾಲಿಕೆ ಸಭಾಂಗಣದಲ್ಲಿ ನಗರ ಪಾಲಿಕೆ, ಕನ್ನಡ ಪರ ಸಂಘಟನೆಗಳು ಮತ್ತು ಪತ್ರಕರ್ತರ ಆಶ್ರಯದಲ್ಲಿ 66ನೇ ಕನ್ನಡ ರಾಜ್ಯೋತ್ಸವ ಆಚರಣೆ ಕುರಿತಂತೆ ಇಂದು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾಷೆಯ ಹೆಸರಿನಲ್ಲಿ ಉತ್ಸವ ನಡೆಯುತ್ತಿರುವುದು ಕರ್ನಾಟಕದಲ್ಲಿ ಮಾತ್ರ. ಅಂತೆಯೇ ನಗರದಲ್ಲಿ ಪಾಲಿಕೆ, ಕನ್ನಡ ಪರ ಸಂಘಟನೆಗಳು, ಪತ್ರಕರ್ತರು ಸೇರಿಕೊಂಡು ಕನ್ನಡ ಉತ್ಸವವನ್ನು ಆಚರಿಸುತ್ತಿರುವುದು ವಿಶೇಷ. ಈ ರೀತಿಯ ಉತ್ಸವಗಳನ್ನು ಎಲ್ಲರೂ ಒಗ್ಗೂಡಿ ಮಾಡಿದರೆ ಅರ್ಥಪೂರ್ಣವಾಗುವುದಲ್ಲದೇ, ಕನ್ನಡದ ಹಿರಿಮೆ, ಗರಿಮೆ ಪಸರಿಸಿ, ಉಳಿಸಲು ಸಾಧ್ಯವಾಗಲಿದೆ. ಈ ರೀತಿಯಿಂದ ಉತ್ಸವವು ಯಶ ಕಾಣಲಿದೆ. ಹಾಗಾಗಿ ಈ ಬಾರಿ ಇನ್ನೂ ವಿಶೇಷವಾಗಿ ಆಚರಿಸೋಣ ಎಂದು ಕರೆ ನೀಡಿದರು.

ಕನ್ನಡಪರ ಹೋರಾಟಗಾರ ನಾಗೇಂದ್ರ ಬಂಡೀಕರ್ ಮಾತನಾಡಿ, ಈ ಬಾರಿ ಮೂರು ವರ್ಷಗಳ ಸಂಭ್ರಮವನ್ನು ಮೂರು ದಿನಗಳ ಕಾಲ ಮಾಡೋಣ. ಸಾರ್ವಜನಿಕರು ಭಾಗವಹಿಸುವಂತಹ ಕಾರ್ಯಕ್ರಮಗಳ ಆಯೋಜಿಸಬೇಕು. ಸಾಧಕರಿಗೆ ಸನ್ಮಾನ ವಿಚಾರದಲ್ಲಿ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಬೇಕು. ಸನ್ಮಾನಕ್ಕೆ ಸಾಧನೆ ಮುಖ್ಯವೇ ಹೊರತು ವಯಸ್ಸು, ಜಾತಿ, ಲಿಂಗ ಅಲ್ಲ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಜಿ. ಯಲ್ಲಪ್ಪ ಮಾತನಾಡಿ, ರಾಜ್ಯ ಸರ್ಕಾರದ ಮಾತಾಡ್ ಮಾತಾಡ್ ಕನ್ನಡ ಕಾರ್ಯಕ್ರಮಕ್ಕೆ ಇಡೀ



ಕರ್ನಾಟಕವೇ ಸ್ಪಂದಿಸಿದೆ. ಅದೇ ಮಾದರಿಯಲ್ಲಿ ದಾವಣಗೆರೆ ನಗರದ ಮನೆ ಮನೆಗಳಲ್ಲಿ ಕನ್ನಡದ ಕಲರವ ಹರಡುವಂತೆ ಈ ಬಾರಿ 3 ದಿನ ರಾಜ್ಯೋತ್ಸವ ಆಚರಿಸಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಬಾ.ಮ. ಬಸವರಾಜ್ ಮಾತನಾಡಿ, ಕನ್ನಡೇತರ ನಾಮಫಲಕಗಳ ತೆರವು ಅಧಿಕಾರ ಕಳೆದ ಹತ್ತು ವರ್ಷಗಳ ಹಿಂದೆಯೇ ಕಾರ್ಮಿಕ ಇಲಾಖೆಯಿಂದ ಪಾಲಿಕೆಗೆ ವರ್ಗಾವಣೆ ಆಗಿದೆ. ಈ ಅಧಿಕಾರವನ್ನು ಉಪಯೋಗಿಸಿಕೊಂಡು ನಗರದಲ್ಲಿರುವ ಕನ್ನಡೇತರ ನಾಮಫಲಕಗಳನ್ನು ತೆರವುಗೊಳಿಸುವ ಕೆಲಸವನ್ನು ಪಾಲಿಕೆ ಮಾಡಬೇಕೆಂದು ಆಗ್ರಹಿಸಿದರು.

ಡಿಎಸ್‌ಎಸ್ ಮುಖಂಡ ಹೆಗ್ಗೆರೆ ರಂಗಪ್ಪ ಮಾತನಾಡಿ, ಪ್ರಚಲಿತ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುವ ವಿಷಯಗಳ ವಿಚಾರ ಸಂಕಿರಣ, ಕವಿಗೋಷ್ಠಿಗೆ ಆದ್ಯತೆ ನೀಡಬೇಕು. ಸ್ಥಳಿಯ ಕಲಾವಿದರಿಗೆ ಹೆಚ್ಚು ಅವಕಾಶ ನೀಡಬೇಕು ಎಂದರು.

ಕನ್ನಡ ಸಮರ ಸೇನೆ ಮಹಿಳಾ ಘಟಕದ ಅಧ್ಯಕ್ಷೆ ದಾಕ್ಷಾಯಣಮ್ಮ ಮಾತನಾಡಿ, ಆಯ್ಕೆ ಸಮಿತಿಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಬೇಕು. ಸನ್ಮಾನಗಳಿಗೆ ಮಹಿಳೆಯರನ್ನು ಹೆಚ್ಚು ಪರಿಗಣಿಸಬೇಕು ಎಂದರು.

ಕನ್ನಡ ಜಾಗೃತಿ ಸಮಿತಿ ಸದಸ್ಯ ಮಹಾಲಿಂಗಪ್ಪ ಮಾತನಾಡಿ, ಚಿತ್ರ ಕಲಾವಿದರಿಗೆ ಕಲಾ ಪ್ರದರ್ಶನಕ್ಕೆ ಅವಕಾಶ ನೀಡಬೇಕು. ಆಂಗ್ಲ ಭಾಷೆಯ ನಾಮಫಲಕಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ನಗರಸಭೆ ಮಾಜಿ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಮಾತನಾಡಿ, ನವೆಂಬರ್ 20 ರಿಂದ 22 ಅಥವಾ 28 ರಿಂದ 30 ಈ ಎರಡು ದಿನಗಳಲ್ಲಿ ಯಾವುದಾದರೂ ಒಂದು ದಿನದಲ್ಲಿ ಕಾರ್ಯಕ್ರಮ ಆಯೋಜಿಸಿದರೆ ಉತ್ತಮ.ಈ ಹಿನ್ನೆಲೆಯಲ್ಲಿ ಶೀಘ್ರವೇ ಸಮಿತಿ ಮತ್ತು ಉಪ ಸಮಿತಿಗಳನ್ನು ರಚಿಸಿ ಎಂದು ಸಲಹೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ ಮಾತನಾಡಿ, ಸಾಧಕರಿಗೆ ಸನ್ಮಾನದ ಜೊತೆಗೆ ನಗದು ರೂಪದಲ್ಲಿ ಗೌರವ ಧನ ನೀಡಿದರೆ ಉತ್ತಮ. ಇದು ಪಾಲಿಕೆಗೆ ದೊಡ್ಡ ಹೊರೆ ಆಗುವುದಿಲ್ಲ ಎಂದರು.

ಸಭೆಯಲ್ಲಿ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಅಖಂಡ ಕರ್ನಾಟಕ ರಕ್ಷಣಾ ವೇದಿಕೆಯ ಸೋಮಶೇಖರ್, ಕೆ.ಟಿ. ಗೋಪಾಲಗೌಡ, ರಾಜಶೇಖರ್ ಗುಂಡಗಟ್ಟಿ, ಸಿದ್ದೇಶ್ ಕೋಟಿಹಾಳ್, ಸೋಮಲಾಪುರದ ಹನುಮಂತಪ್ಪ, ಶಿವಯೋಗಿಸ್ವಾಮಿ, ದಲಿತ ಸಂಘಟನೆಗಳ ಒಕ್ಕೂಟದ ಬಸವರಾಜ್ ಇತರರು ಸಲಹೆ ನೀಡಿದರು. ಪಾಲಿಕೆ ಉಪಮೇಯರ್ ಶಿಲ್ಪ ಜಯಪ್ರಕಾಶ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾಪ್ರಕಾಶ್, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಆಯುಕ್ತ ವಿಶ್ವನಾಥ್ ಮುದಜ್ಜಿ ಸೇರಿದಂತೆ, ಇತರರು ಇದ್ದರು.

### ಸಭೆ ಮೊಟಕುಗೊಳಿಸಿದ ಮೇಯರ್

ನಗರ ಪಾಲಿಕೆ, ಕನ್ನಡಪರ ಸಂಘಟನೆಗಳು ಹಾಗೂ ಪತ್ರಕರ್ತರ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಸಂಬಂಧ ಶುಕ್ರವಾರ ಮಹಾಪೌರ ಎಸ್.ಟಿ. ವೀರೇಶ್ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯನ್ನು ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೂ ಮುನ್ನ ಬಂದ ಅನಾರೋಗ್ಯದ ಮಾಹಿತಿ ಹಿನ್ನೆಲೆಯಲ್ಲಿ ಬೇಗನೇ ಸಭೆ ಮುಕ್ತಾಯಗೊಳಿಸಲಾಯಿತು.

ಪ್ರಾರಂಭವಾಗಿ ಸುಮಾರು 3-4 ತಾಸಿನ ನಂತರ ಪುನೀತ್ ರಾಜಕುಮಾರ್ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಮೇಯರ್ ಎಸ್.ಟಿ. ವೀರೇಶ್ ಅವರು ಸಭೆಗೆ ಅಂತ್ಯ ಹಾಡಿದರು.

# ಅಕಾಲದಲ್ಲೇ ಅಗಲಿದ ಅಪ್ಪು

**(1ನೇ ಪುಟದಿಂದ)** ಒಡೆಯಿತು.

ಸಂಜೆವರೆಗೂ ನಿವಾಸದಲ್ಲಿದ್ದ ಅವರ ಪಾರ್ಥಿವ ಶರೀರವನ್ನು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಅಭಿಮಾನಿಗಳು ಮತ್ತು ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಯಿತು.

ಕೊರೊನಾ ಎರಡನೇ ಅಲೆಯಲ್ಲಿ ಪುನೀತ್ ಸೋಂಕಿಗೆ ಒಳಗಾಗಿ ಚಿಕಿತ್ಸೆ ಪಡೆದುಕೊಂಡಿದ್ದರು, ಆ ನಂತರ ಅವರ ಕೂದಲು ಉದುರುವಿಕೆ ಆರಂಭವಾಗಿತ್ತು.

ಸೋಂಕಿಗೆ ಒಳಗಾಗಿದ್ದ ಪುನೀತ್ ಅವರು ಹೃದಯಾಘಾತದ ತೀವ್ರತೆಗೆ ಒಳಗಾಗಲು ಇದೂ ಸಹಾ ಒಂದು ಕಾರಣ ಎಂದು ವೈದ್ಯರು ತಿಳಿಸಿದ್ದಾರೆ.

ವರನಟ ಡಾ. ರಾಜ್‌ಕುಮಾರ್ ಕುಟುಂಬದ ಕಿರಿಯ ಕುಡಿಯಾಗಿ ಜನಿಸಿದ ಪುನೀತ್ ಚಿಕ್ಕವಯಸ್ಸಿನಲ್ಲೇ ತಮ್ಮ ತಂದೆಯ ಜೊತೆ ಬಣ್ಣ ಹಚ್ಚಿಕೊಂಡು ಸಿನೆಮಾ ನಟನೆಗೆ ಇಳಿದಿದ್ದರು. ಅವರ ಇಬ್ಬರು ಹಿರಿಯ ಸಹೋದರರಾದ ಶಿವರಾಜ್‌ಕುಮಾರ್ ಮತ್ತು ರಾಘವೇಂದ್ರ ರಾಜ್‌ಕುಮಾರ್ ಕನ್ನಡ ಚಿತ್ರರಂಗದಲ್ಲಿ ಮೇರು ನಟರಾಗಿ ಖ್ಯಾತಿ ಗಳಿಸಿದ್ದರು. ಅದೇ ದಾರಿಯಲ್ಲಿ ಪುನೀತ್ ತಂದೆಯಂತೆ ಜನಾಕರ್ಷಣೆಯ ಚಿತ್ರಗಳನ್ನು ನೀಡಿದ್ದರು. ಡಾ. ರಾಜ್‌ಕುಮಾರ್ ಸಹಾ ತೀವ್ರ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆಯಲ್ಲೇ ಕೊನೆಯಿಸಿರೆಳೆದಿದ್ದನ್ನು ಇಲ್ಲಿ ಸ್ಮರಿಸಬಹುದು.

ಪುನೀತ್ ಕಸರತ್ತು ಮಾಡುತ್ತಿದ್ದ ಇದೇ ಜಿಮ್‌ನಲ್ಲಿ ಸಹೋದರ ರಾಘವೇಂದ್ರ ರಾಜ್‌ಕುಮಾರ್ ಕುಸಿದು ಲಘು ಹೃದಯಾಘಾತಕ್ಕೆ ಒಳಗಾಗಿದ್ದರು. ಇದಾದ ನಂತರ ಅವರು ಎರಡು ಬಾರಿ ಹೃದಯಾಘಾತಕ್ಕೆ ಒಳಗಾಗಿ ಚಿಕಿತ್ಸೆ ಪಡೆದಿದ್ದರು. ಇದಾದ ನಂತರ ಅವರ ಹಿರಿಯ ಸಹೋದರ ಶಿವರಾಜ್‌ಕುಮಾರ್ ಸಹಾ ಮನೆಯಲ್ಲಿ ವ್ಯಾಯಾಮ ಮಾಡುವಾಗಲೇ ಹೃದಯಾಘಾತಕ್ಕೆ ಒಳಗಾಗಿದ್ದರು. ಇವರೆಲ್ಲರಿಗೂ ಖ್ಯಾತ ವೈದ್ಯ ರಮಣಶ್ರೀ ಅವರೇ ಕುಟುಂಬದ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದರು.

ಇಂದೂ ಕೂಡ ಪುನೀತ್ ಹೃದಯಾಘಾತಕ್ಕೆ ಒಳಗಾದಾಗ ಪ್ರಥಮವಾಗಿ ರಮಣಶ್ರೀ ಕ್ಲಿನಿಕ್‌ಗೆ ಕರೆ ತರಲಾಗಿತ್ತು.

ತಕ್ಷಣವೇ ಅವರಿಗೆ ಇಸಿಜಿ ಮಾಡಿ ತೀವ್ರ ಹೃದಯಾಘಾತವಾಗಿದೆ ಎಂದು ಡಾ. ರಮಣಶ್ರೀ ಅವರು ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಪುನೀತ್ ಕಾರಿನಲ್ಲೇ ವಿಕ್ರಂ ಆಸ್ಪತ್ರೆಗೆ ಕರೆ ತರಲಾಯಿತು. ನಟನಾಗಿ, ಹಿನ್ನೆಲೆ ಗಾಯಕ ನಾಗಿದ್ದ ಪುನೀತ್ ಪಿಆರ್‌ಕೆ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಸಿನೆಮಾ ನಿರ್ಮಾಣವನ್ನೂ ಮಾಡಿದ್ದರು. ಬಾಲನಟನಾಗಿ ಮತ್ತು ನಟನಾಗಿ ಒಟ್ಟು 49 ಚಿತ್ರಗಳಲ್ಲಿ ಅಭಿನಯಿಸಿದ್ದ ಪುನೀತ್, ಐವತ್ತನೇ ಚಿತ್ರ ಹಾಗೂ 50ನೇ ವಯಸ್ಸಿಗೆ ಕಾಲಿಡುವ ಮೊದಲೇ ವಿಧಿವಶರಾದರು.

## ಬಾಲ್ಯದಲ್ಲೇ 'ಬೆಟ್ಟದ ಹೂವು'

**(1ನೇ ಪುಟದಿಂದ)** ಕರೆದುಕೊಂಡು ಹೋಗುತ್ತಿದ್ದರು.

ಪುನೀತ್ ಡಿಸೆಂಬರ್ 1, 1999 ರಂದು ಅಶ್ವಿನಿ ಅವರನ್ನು ವಿವಾಹವಾದರು.

ಪುನೀತ್ ಬಾಲನಟರಾಗಿ ಅಭಿನಯಿಸಿದ್ದ 'ಬೆಟ್ಟದ ಹೂವು' ಸಾಕಷ್ಟು ಹೆಸರು ತಂದಿತ್ತು. ರಾಮು ಪಾತ್ರದ ಬಾಲ ನಟನೆಗೆ ಅವರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೂ ಪಾತ್ರರಾಗಿದ್ದರು.

ಅವರು ಪ್ರಸಿದ್ಧ ಟಿವಿ ಪ್ರದರ್ಶನ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದ ನಿರೂಪಣೆ ಮಾಡಿದ್ದಾರೆ.

ಪುನೀತ್ ಮೊದಲ ಬಾರಿಗೆ 2002ರಲ್ಲಿ 'ಅಪ್ಪು' ಚಿತ್ರದಲ್ಲಿ ನಾಯಕನ ಪಾತ್ರದಲ್ಲಿ ಅಭಿನಯಿಸಿದರು. ಅವರು ಅಭಿ (2003), ಆಕಾಶ್ (2005), ಅರಸು (2007), ಮಿಲನ (2007), ಜಾಕಿ (2010), ಹುಡುಗರು (2011), ಅಣ್ಣಾ ಬಾಂಡ್ (2012) ಮತ್ತು ಪವರ್ (2014) ಸೇರಿದಂತೆ ಇತರೆ ಯಶಸ್ವೀ ಚಲನಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಬಾಲ್ಯದಲ್ಲಿ ತನ್ನ ತಂದೆ ರಾಜಕುಮಾರ್ ಅಭಿನಯದ ಚಿತ್ರಗಳಲ್ಲಿ ಬಾಲ ನಟನಾಗಿ ವಸಂತ ಗೀತ (1980), ಭಾಗ್ಯದಾತ (1981), ಚಲಿಸುವ ಮೋಡಗಳು (1982), ಎರಡು ನಕ್ಷತ್ರಗಳು (1983) ಮತ್ತು ಬೆಟ್ಟದ ಹೂವು (1985) ಚಿತ್ರಗಳಲ್ಲಿ ಅಭಿನಯಿಸಿ, ಮೆಚ್ಚುಗೆ ಪಡೆದಿದ್ದರು.

## ಕಂಠೀರವದಲ್ಲಿ ಅಂತಿಮ ದರ್ಶನ

**(1ನೇ ಪುಟದಿಂದ) ಅಭಿಮಾನಿಗಳ ಅಂತಿಮ ದರ್ಶನಕ್ಕೆ ಇಡಲಾಗುವುದು.**

**ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸರ್ಕಾರಿ ಗೌರವಗಳೊಂದಿಗೆ ಪುನೀತ್ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಹೇಳಿದ್ದಾರೆ.**

**ಪುನೀತ್ ಕುಟುಂಬದ ಸದಸ್ಯರು ಇಷ್ಟಪಡುವ ರೀತಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು, ಅವರು ಎಲ್ಲಿ, ಯಾವ ಸ್ಥಳದಲ್ಲಿ ಹೇಳುವರೋ ಅಲ್ಲಿ ಅಂತ್ಯಕ್ರಿಯೆ ಜರುಗಲಿದೆ ಎಂದರು.**

## ಪುನೀತ್ ನಿಧನ ಸಮಷ್ಠಿಗೆ ಆದ ನಷ್ಟ

**(1ನೇ ಪುಟದಿಂದ)** ಇಟ್ಟುಕೊಂಡಿದ್ದರು. ಇಷ್ಟೊಂದು ಸಣ್ಣ ವಯಸ್ಸಿನಲ್ಲಿಯೇ ಇಹಲೋಕ ತ್ಯಜಿಸಿರುವುದು ನಿಜಕ್ಕೂ ದೌರ್ಭಾಗ್ಯ ಎಂದು ನಾನು ಭಾವಿಸಿದ್ದೇನೆ.

ಪುನೀತ್ ರಾಜಕುಮಾರ್ ಆತ್ಮಕ್ಕೆ ಸದ್ಗತಿ ದೊರೆಯಲಿ. ಅಣ್ಣಾವ್ರ ಕುಟುಂಬ ವರ್ಗಕ್ಕೆ ಹಾಗೂ ಅಭಿಮಾನಿಗಳಿಗೆ ದುಃಖಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುವುದಾಗಿ ಸಿದ್ದೇಶ್ವರ್ ಹೇಳಿದ್ದಾರೆ.

## ವಿಧಿಯ ಆಟ ಕ್ರೂರ ಎಂದ ಪ್ರಧಾನಿ

**(1ನೇ ಪುಟದಿಂದ)** ಹೇಳಿದರು.

ಕಿರಿಯ ವಯಸ್ಸಿನಲ್ಲಿ ದೊಡ್ಡ ಸಾಧನೆ ಮಾಡಿದ ರಾಷ್ಟ್ರಪ್ರಶಸ್ತಿ ಪುರಸ್ಕೃತ, ಜನಪ್ರಿಯ ಮೇರು ನಟ ಇಂದು ವಿಧಿಯ ಕ್ರೂರ ಆಟಕ್ಕೆ ಬಲಿಯಾಗಿದ್ದಾರೆ. ವೈಯಕ್ತಿಕವಾಗಿ ಅತ್ಯಂತ ಆತ್ಮೀಯ ಸಹೃದಯ ಬಂಧುವನ್ನು ಕಳೆದುಕೊಂಡಿದ್ದೇನೆ ಎಂದು ತಿಳಿಸಿದರು.

ಪುನೀತ್ ಉತ್ಸಾಹಿ, ಪ್ರತಿಭೆ, ಅವರ ಅನೇಕ ಅತ್ಯುತ್ತಮ ಚಲನಚಿತ್ರಗಳನ್ನು, ಕನ್ನಡದ ಸಾಂಸ್ಕೃತಿಕ ರಾಯಭಾರಿಯಂತೆ ನಾಡಿನ ಸಮಸ್ತ ಜನತೆಯ ಮನೆ, ಮನ ತಲುಪಿದ್ದ ಅವರ ವ್ಯಕ್ತಿತ್ವವನ್ನು ಮರೆಯುವುದು ಸಾಧ್ಯವೇ ಇಲ್ಲ. ಅವರ ಆತ್ಮಕ್ಕೆ ಸದ್ಗತಿಯನ್ನು ಭಗವಂತ ನೀಡಲಿ, ಅವರ ಕುಟುಂಬದವರಿಗೆ ದುಃಖ ಸಹಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದವರು ಹೇಳಿದ್ದಾರೆ.

ಈ ದುಃಖಕರ ಸನ್ನಿವೇಶದಲ್ಲಿ ಭಾವಾವೇಶಕ್ಕೆ ಒಳಗಾಗಿ ಅಹಿತಕರ ಘಟನೆಗಳಿಗೆ ಅವಕಾಶ ಕೊಡದೆ ಶಾಂತಿ, ಸಂಯಮದಿಂದ ವರ್ತಿಸಿ, ಪುನೀತ್ ಅವರಿಗೆ ಅಂತಿಮ ನಮನಗಳನ್ನು ಸಲ್ಲಿಸೋಣ ಎಂದು ಅಭಿಮಾನಿಗಳಲ್ಲಿ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

ಪುನೀತ್ ರಾಜ್ ಕುಮಾರ್ ಅವರ ಅಂತ್ಯಕ್ರಿಯೆಯು ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ. ನಾಯಕನಷ್ಟೇ ಅಲ್ಲ, ನಾಯಕತ್ವದ ಗುಣ ಇರುವ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರ ನಡೆ - ನುಡಿ ಡಾ. ರಾಜ್‌ಕುಮಾರ್ ಅವರ ರೀತಿಯಲ್ಲೇ ನಯ ವಿನಯದಿಂದ ಕೂಡಿತ್ತು ಎಂದು ಬೊಮ್ಮಾಯಿ ಹೇಳಿದ್ದಾರೆ.

ನನ್ನ ಹಾಗೂ ರಾಜ್‌ಕುಮಾರ್ ಕುಟುಂಬದವರ ಒಡನಾಟ ಹಳೆಯದು. ಅಪ್ಪು ಸಣ್ಣ ಮಗುವಾಗಿದ್ದಾಗಿನಿಂದ ನೋಡಿದ್ದೇನೆ. ಇನ್ನೂ ಭವ್ಯ ಭವಿಷ್ಯ ಇತ್ತು. ವಿಧಿ ಕ್ರೂರವಾಗಿದೆ ಎಂದವರು ವಿಷಾದಿಸಿದ್ದಾರೆ.

ಪುನೀತ್ ನಿಧನಕ್ಕೆ ಕಾಂಗ್ರೆಸ್ ವರಿಷ್ಠ ನಾಯಕ ರಾಹುಲ್ ಗಾಂಧಿ ಶೋಕ ವ್ಯಕ್ತಪಡಿಸಿ, ಕನ್ನಡ ಚಿತ್ರ ನಟ ಪುನೀತ್ ಅಗಲಿಕೆಯ ದುಃಖ ಭರಿಸುವ ಶಕ್ತಿ ಅವರ ಅಭಿಮಾನಿಗಳು ಹಾಗೂ ಕುಟುಂಬ ವರ್ಗಕ್ಕೆ ಲಭಿಸಲಿ ಎಂದು ತಿಳಿಸಿದ್ದಾರೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಶೋಕ ಸಂದೇಶದಲ್ಲಿ, ಡಾ.ರಾಜ್ ಕುಮಾರ್ ಕಾಲದಿಂದಲೂ ಅವರ ಕುಟುಂಬದ ಜೊತೆಯಲ್ಲಿ ಆತ್ಮೀಯ ಸಂಬಂಧ ಹೊಂದಿದ್ದ ನನಗೆ, ಪುನೀತ್ ಅಗಲಿಕೆ ಮನೆಯ ಸದಸ್ಯರೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶೋಕ ಸಂದೇಶದಲ್ಲಿ, ಯುವನಟ ಪುನೀತ್ ರಾಜ್‌ಕುಮಾರ್ ನಿಧನ ಊಹೆಗೂ ನಿಲುಕದ್ದಾಗಿದೆ, ಕನ್ನಡ ಚಿತ್ರರಂಗ ಒಬ್ಬ ಪ್ರತಿಭಾವಂತ ನಟನನ್ನು ಕಳೆದುಕೊಂಡಂತಾಗಿದೆ, ಅವರ ಅಭಿಮಾನಿಗಳು ಹಾಗೂ ಕುಟುಂ ಬಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ ಅವರು, ಕನ್ನಡ ಚಿತ್ರ ರಂಗದ ಖ್ಯಾತ ಚಿತ್ರನಟ, ಯುವ ರತ್ನ ಪುನೀತ್ ರಾಜ್‌ಕುಮಾರ್ ಅವರ ನಿಧನದ ಸುದ್ದಿ ತಿಳಿದು ಮನಸ್ಸಿಗೆ ತೀವ್ರ ಆಘಾತವಾಗಿದೆ, ಅವರು ನಟಿಸಿದ್ದ ಪೃಥ್ವಿ ಮತ್ತು ರಾಜಕುಮಾರ ಚಿತ್ರವನ್ನು ಅವರ ಜೊತೆಯಲ್ಲೇ ನೋಡಿದ್ದೆ, ಈ ದಿನ ಅವರಿಲ್ಲ ಎಂದರೆ ನಂಬಲ ಸಾಧ್ಯವಾಗಿದೆ, ಈ ದಿನ ಯುವ ರತ್ನವನ್ನು ಕಳೆದುಕೊಂಡು, ಕರುನಾಡು ಬರಿದಾಗಿದೆ, ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ, ದೇವರು ಅವರ ಕುಟುಂಬ ವರ್ಗಕ್ಕೆ ಹಾಗೂ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ತುಂಬಲಿ ಎಂದು ಪ್ರಾರ್ಥಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮಾತನಾಡಿ, ಪುನೀತ್ ನನಗೆ ಆತ್ಮೀಯರಾಗಿದ್ದರು, ಕುಟುಂಬದ ಸ್ನೇಹಿತರಾಗಿದ್ದರು, ನಮ್ಮಿಬ್ಬರ ಕುಟುಂಬ ಸದಸ್ಯರ ನಡುವೆ ಉತ್ತಮ ಒಡನಾಟವಿತ್ತು, ನಾವಿಬ್ಬರೂ ಒಟ್ಟಿಗೆ ವಾಕಿಂಗ್ ಮಾಡಿದ್ದೇವೆ, ಜಿಮ್ ಮಾಡಿದ್ದೇವೆ, ಚಿತ್ರರಂಗ ಸೇರಿದಂತೆ ಅನೇಕ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ, ಶಿಸ್ತುಬದ್ಧ ಜೀವನ, ಕಟ್ಟುನಿಟ್ಟಿನ ವ್ಯಾಯಾಮದ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಂಡಿದ್ದರು ಎಂದು ಸ್ಮರಿಸಿದ್ದಾರೆ.

ಪುನೀತ್ ಅಗಲಿಕೆ ಕೇವಲ ಚಿತ್ರರಂಗಕ್ಕಷ್ಟೇ ಅಲ್ಲ, ಇಡೀ ನಾಡಿಗೆ ತುಂಬಲಾರದ ನಷ್ಟವಾಗಿದೆ, ಅವರ ಅಗಲಿಕೆಯ ನೋವು ಭರಿಸುವ ಶಕ್ತಿಯನ್ನು ಅವರ ಕುಟುಂಬ ಸದಸ್ಯರು ಹಾಗೂ ಇಡೀ ನಾಡಿಗೆ ಭಗವಂತ ನೀಡಲಿ ಎಂದು ಅವರು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.


**ಶ್ರೀ ಶಶಿ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ**
#337/49 ಪಿ., ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ನಿಸರ್ಗ ಕಂಫರ್ಟ್ ಮುಂಭಾಗದ ರಸ್ತೆ, ಗಣೇಶ ಲೇಔಟ್, ದಾವಣಗೆರೆ.

**ವಾರ್ಷಿಕ ಮಹಾಸಭೆ**

ಶ್ರೀ ಶಶಿ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತದ ವಾರ್ಷಿಕ ಮಹಾಸಭೆಯು ದಿನಾಂಕ : 30.10.2021ನೇ ಶನಿವಾರ ಬೆಳಿಗ್ಗೆ 11-00 ಗಂಟೆಗೆ 2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸಂಘದ ಕಚೇರಿಯಲ್ಲಿ ನೆರವೇರಲಿದೆ. ಸರ್ವ ಸದಸ್ಯರು ಆಗಮಿಸಬೇಕಾಗಿ ಕೋರಲಾಗಿದೆ.

**ಶ್ರೀಮತಿ ಲಲಿತಾಂಬ ಎಸ್.**
ಅಧ್ಯಕ್ಷರು



**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.,**
ಆಡಳಿತ ಕಛೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ.
08192-272802, 276092

**ಸ್ಥಿರಾಸ್ತಿ ಕೊಳ್ಳುವವರಿಗೆ ಸುವರ್ಣಾವಕಾಶ**

ಹರಾಜಾಗುವ ಸ್ವತ್ತುಗಳ ವಿವರ

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೇತೂರು ಗ್ರಾಮದ ಸರ್ವೆ ನಂ. 103/2 ರಲ್ಲಿರುವ ನಂ.560 ರಿಂದ 569 ಒಟ್ಟು ಹತ್ತು ನಿವೇಶನಗಳನ್ನು, ದಿನಾಂಕ 30.10.2021ರ ಶನಿವಾರ, ಸಮಯ: ಬೆಳಿಗ್ಗೆ 12 ಗಂಟೆಗೆ ಸೊತ್ತಿನ ಮುಂಭಾಗದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತರು ಹರಾಜಿನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಬಿಡ್ ಮಾಡಿ ಸದರಿ ನಿವೇಶನಗಳನ್ನು ಖರೀದಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಅಧಿಕಾರಿಗಳನ್ನು ಸಂಪರ್ಕಿಸಬಹುದು
ಸಹಿ/- ಪ್ರಧಾನ ವ್ಯವಸ್ಥಾಪಕರು



**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್, ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ :

**ಪ್ರಿಯಾಂಕ ಜಿ.ಪಿ.,** ಇಂಜಿನಿಯರ್
**+91 70190 70400**

**ಮೂರ್ತಿ ಜಿ.ಎಸ್.ಡಿ.,** ಇಂಜಿನಿಯರ್
**+91 98445 69698**

2ನೇ ಮೇನ್, ಪಿ.ಜೆ. ಬಡಾವಣೆ, ಸಿ.ಜಿ. ಆಸ್ಪತ್ರೆ ರೋಡ್, ವಿಜಯ ಹೋಟೆಲ್ ಎದುರು, ದಾವಣಗೆರೆ - 577 004.


## ನ.1 ರಂದು ರೈತ ಮಾಹಿತಿ ಕಾರ್ಯಾಗಾರ, ಕನ್ನಡ ರಾಜ್ಯೋತ್ಸವ

ದಾವಣಗೆರೆ, ಅ.29- ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಹಾಗೂ ತಾಲ್ಲೂಕು ಗ್ರಾಮಾಂತರ ಘಟಕದ ಸಹಯೋಗದಲ್ಲಿ ರೈತ ಮಾಹಿತಿ ಕಾರ್ಯಾಗಾರ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪಂಚಮಸಾಲಿ ಸಮಾಜದ ತಾಲ್ಲೂಕು ಕಾರ್ಯಾಧ್ಯಕ್ಷ ಎಂ.ಎಸ್.ಜಯಣ್ಣ ಬಿಸಲೇರಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ನವೆಂಬರ್ 1ರಂದು ಬೆಳಗ್ಗೆ 10 ಕ್ಕೆ ಜಿಲ್ಲೆಯ ಹರಿಹರ-ಶಿವಮೊಗ್ಗ ರಸ್ತೆಯಲ್ಲಿರುವ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸಾನಿಧ್ಯವನ್ನು ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ವಹಿಸಲಿದ್ದು, ತಾಲ್ಲೂಕು ಅಧ್ಯಕ್ಷ ಕಿತ್ತೂರು ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಪಂಚಮಸಾಲಿ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಪ್ರಗತಿಪರ ಕೃಷಿಕ ಎಸ್.ಎಸ್.ಎತ್ತಿನಮನೆ, ಸಮಾಜದ ಜಿಲ್ಲಾ ಕಾರ್ಯಾಧ್ಯಕ್ಷ ಬಿ.ಲೋಕೇಶ್ ಭಾಗವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ವಿ.ಚಿಂತಾಲ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಲಕ್ಷ್ಮೀಕಾಂತ ಬೊಮ್ಮನ್ನವರ್, ತರಬಾಳು ಕೃಷಿ ವಿಜ್ಞಾನ ಕೇಂದ್ರದ ಪಶು ವಿಷಯತಜ್ಞ ಡಾ.ಜಿ.ಕೆ.ಜಯದೇವಪ್ಪ, ಲೀಡ್ ಬ್ಯಾಂಕ್ ವಿಭಾಗೀಯ ಪ್ರಬಂಧಕ ಸುಶ್ರುತ್ ಡಿ.ಶಾಸ್ತ್ರಿ, ಸಾವಯವ ಕೃಷಿಕ ಶಿವಾನಂದ ನಾಗರ ಪಾಲ್ಗೊಳ್ಳುವರು ಎಂದು ತಿಳಿಸಿದರು.

ಸಮಾಜದ ಮುಖಂಡರಾದ ಕಿತ್ತೂರು ವೀರಣ್ಣ, ಕೈದಾಳೆ ರುದ್ರಸ್ವಾಮಿ, ಕಾಶಿನಾಥ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಕಪ್ಪು ಪಟ್ಟಿಗೆ ಸೇರಿಸಿದ ಚೀನ

**(1ನೇ ಪುಟದಿಂದ)** ನೀಡಬೇಕಿದ್ದ ಬಾಕಿಯನ್ನು ತಡೆದಿದೆ. ಗೊಬ್ಬರದಲ್ಲಿ ಹಾನಿಕಾರಕರ ಬ್ಯಾಕ್ಟೀರಿಯಾಗಳಿವೆ ಎಂದು ಶ್ರೀಲಂಕಾ ಕಂಪನಿ ತಿಳಿಸಿತ್ತು. ಪಾವತಿಯನ್ನು ತಡೆಯುವ ಸಲುವಾಗಿ ವಾಣಿಜ್ಯ ಹೈಕೋರ್ಟ್‌ನಿಂದ ಅಕ್ಟೋಬರ್ 22ರಂದು ಸಿಲೋನ್ ಫರ್ಟಿಲೈಜರ್ ಅನುಮತಿ ಪಡೆದುಕೊಂಡಿತ್ತು.


**JOB OPENINGS**

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Software Engineers (SAP) | 02 | BCA / MCA / BE | 0-1 |
| 02 | Accountants | 04 | Bcom / Mcom / MBA (FINANCE) TALLY / ERP / SAP BILLING OPERATORS | 0-1 |
| 03 | Accounts (Senior) | 01 | Bcom / Mcom / MBA (FINANCE) GST / INCOME TAX / SAP | 4-5 |
| 04 | Civil Engineers | 02 | Diploma Civil, BE Civil | 0-1 |
| 05 | Marketing/sales Officers | 03 | Bcom / Mcom / BBM / MBA Marketing | 2 |
| 06 | Sales Executives for marketing retail & Project. with 2-wheeler | 10 | Any Degree (Diploma/ITI | 0-1 |
| 07 | Front Office Assistant/Tele BDE Caller (Female) | 02 | Any Degree | 0-1 |
| 08 | Drivers (LCV, HCV) | 03 | LCV, HCV Badge | 0-1 |

Company Name : **HULLUMANE PROPERTIES & POWER PVT LTD.,**
# Depot Address - Behind Shashi Soap Factory
Land Mark-Towards Shiramagondanahalli Road, From Lokikere Road
Lokikere Industrial Area, Davangere-577 005. Karnataka
**Drop Resume to Email - hrhullumanepropertiespwr@yahoo.com**
**Call/Whatsup - 95130 25000**



ರಿ.ನಂ.:596/2010-11
**ಜಂಗಮ ಸೌಹಾರ್ದ ಸಹಕಾರಿ ನಿಯಮಿತ**
# 477/2, ಪ್ರಿಯ ಕಾಂಪ್ಲೆಕ್ಸ್, 16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ. ಫೋ. : 08192-233666

**2020-21ನೇ ಸಾಲಿನ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ,
ನಮ್ಮ ಸಹಕಾರಿಯ 2020-21ನೇ ಸಾಲಿನ 11ನೇ ವಾರ್ಷಿಕ ಮಹಾಸಭೆಯನ್ನು ಹಾಗೂ ನಮ್ಮ ಸಹಕಾರಿಯ 'ದಶಮಾನೋತ್ಸವ' ಸಂಭ್ರಮವನ್ನು **ದಿನಾಂಕ 30.10.2021ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಷ॥ಬ್ರ॥ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ (ಶಿವಾಚಾರ್ಯ ನಿಕೇತನ) ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ** ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಎಂ. ಬಸವರಾಜಯ್ಯ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
**ಶ್ರೀಮತಿ ಕವಿತಾ ಜೆ.** ಕಾರ್ಯದರ್ಶಿ

ವಿಶೇಷ ಸೂಚನೆ: 1) ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದೇ ಇದ್ದ ಸದಸ್ಯರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಮಹಾಸಭೆಗೆ ಆಗಮಿಸಬೇಕಾಗಿ ವಿನಂತಿ.
2) ಮಹಾಸಭೆಯಲ್ಲಿ ಮಾಸ್ಕ್ ಧರಿಸಿ, ಸ್ಯಾನಿಟೈಸರ್ ಬಳಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಾಗಿ ವಿನಂತಿ.

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕ್ರಮ ವಹಿಸಿ

## ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಕಾಯ್ದೆಯಡಿ ನೇಮಕವಾದವರಿಗೆ ತರಬೇತಿ ಕಾರ್ಯಾಗಾರದಲ್ಲಿ ಡಿಸಿ



ದಾವಣಗೆರೆ, ಅ. 29- ಬಾಲಕಾರ್ಮಿಕ ಪದ್ಧತಿ ಹೆಚ್ಚಾಗಲು ಬಡತನವೇ ಮೂಲ ಕಾರಣ. ಅನಕ್ಷರಸ್ಥ ಮತ್ತು ಬಡ ಕುಟುಂಬಗಳಲ್ಲಿ ಬಾಲಕಾರ್ಮಿಕ ಪದ್ಧತಿ ಹೆಚ್ಚಾಗಿದ್ದು, 14 ವರ್ಷ ವಯೋಮಾನದೊಳಗಿನ ಮಕ್ಕಳನ್ನು ಕಾರ್ಖಾನೆ ಅಥವಾ ಇತರೆ ಕೆಲಸಗಳಿಗೆ ದುಡಿಮೆಗೆ ಬಳಸಿಕೊಳ್ಳುವುದು ಅಪರಾಧ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ 1986 ಕಲಂ 17 ರ ಅಡಿಯಲ್ಲಿ ನೇಮಕವಾದ ವಿವಿಧ ಇಲಾಖೆಗಳ ನಿರೀಕ್ಷಕರುಗಳಿಗೆ ಹಾಗೂ ಸಮೀಕ್ಷೆಯಲ್ಲಿ ಭಾಗವಹಿಸುವ ಸ್ವಯಂ ಸೇವಾ ಸಂಸ್ಥೆಗಳ ಸಿಬ್ಬಂದಿಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲ ಕಾರ್ಮಿಕ ಪದ್ಧತಿ ಪಿಡುಗನ್ನು ತೊಲಗಿಸಲು ಎಲ್ಲಾ ಇಲಾಖೆಗಳು ಕೈಜೋಡಿಸಬೇಕು. ಬಾಲ ಕಾರ್ಮಿಕ ಮಕ್ಕಳು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಬೇಕು. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡ ಮಾಲೀಕರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಮಕ್ಕಳ ಕುರಿತು ಸಮೀಕ್ಷೆ ಕೈಗೊಂಡ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಮಕ್ಕಳು ಬಾಲಕಾರ್ಮಿಕ ಪದ್ಧತಿಗೆ ಒಳಪಟ್ಟಿಲ್ಲ ಎಂಬುದನ್ನು ದೃಢೀಕರಿಸಿಕೊಳ್ಳಬೇಕು ಎಂದು ತಿಳಿಸಿದರು.

ಅನಿವಾರ್ಯವಾಗಿ, ಮನೆಯ ಪೂರಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಕೆಲ ಮಕ್ಕಳು ದುಡಿಮೆಯಲ್ಲಿ ತೊಡಗಿಕೊಳ್ಳುವುದು ಸಹಜ. ಅಂತಹ ಬಡ ಮಕ್ಕಳಿಗೆ ಪೂರಕ ವ್ಯವಸ್ಥೆ ಕಲ್ಪಿಸಿಕೊಟ್ಟು, ಆರೋಗ್ಯಕರ ಸೇವೆ ಮಾಡಬೇಕು. ಅಪಾಯಕಾರಿ ಹಾಗೂ ಹಾನಿಕಾರಕ ಉದ್ಯಮಗಳಲ್ಲಿ ಪಾಲ್ಗೊಂಡ ಮಕ್ಕಳ ರಕ್ಷಣೆಗೆ ಕ್ರಮ ತೆಗೆದುಕೊಂಡು, ಶಿಕ್ಷಣ ನೀಡುವ ವ್ಯವಸ್ಥೆಗೆ ಸೂಕ್ತ ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಇಬ್ರಾಹಿಂ ಸಾಬ್ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸ್ಥಾಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಮೂಲಕ ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ ಮಾಡಿದ್ದು, ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯ ಬಾಲ ಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಲು ಕ್ರಮವಹಿಸಲಾಗುತ್ತಿದೆ. 2001 ರಲ್ಲಿ ರಾಜ್ಯ ಸರ್ಕಾರವು ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ರಾಜ್ಯ ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆ ಜಾರಿಗೆ ತಂದ ಪ್ರಥಮ ರಾಜ್ಯವಾಗಿದ್ದು, ವಿದ್ಯಾಭ್ಯಾಸದಿಂದ ವಂಚಿತರಾದ, ಸಾಮಾಜಿಕ ಸಂಕೋಲೆಗಳಲ್ಲಿ ತೊಡಗಿಕೊಂಡಿರುವ ಮಕ್ಕಳನ್ನು ರಕ್ಷಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ವೀಣಾ ಎಸ್.ಆರ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಕೌಸರ್ ರೇಷ್ಮಾ ಜಿ., ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ ಇತರರು ಉಪಸ್ಥಿತರಿದ್ದರು.

# ಮನೆಗೆ ನೀರು: ಪರಿಹಾರ ನೀಡದಿದ್ದರೆ ಪ್ರತಿಭಟನೆ

ದಾವಣಗೆರೆ, ಅ.29- ಇತ್ತೀಚೆಗೆ ಸುರಿದ ಭಾರೀ ಮಳೆಗೆ ಎಸ್‌ಪಿಎಸ್ ನಗರ ಒಂದನೇ ಹಂತದಲ್ಲಿರುವ ಸುಮಾರು 300 ಮನೆಗಳಿಗೆ ನೀರು ನುಗ್ಗಿ ಸಾಕಷ್ಟು ಹಾನಿ ಸಂಭವಿಸಿದೆ. ಪಾಲಿಕೆ ಆಯುಕ್ತರು, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲಿಸಿದ್ದರೂ, ಈವರೆಗೆ ಪರಿಹಾರ ನೀಡಿಲ್ಲ. ಇನ್ನು 8 ದಿನಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸದಿದ್ದರೆ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಭೀಮ್ ಆರ್ಮಿ ತಾಲೂಕು ಅಧ್ಯಕ್ಷ ಹೆಚ್.ಬಸವರಾಜ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದ್ದಾರೆ. ಸಂಘಟನೆ ತಾಲ್ಲೂಕು ಗೌರವಾಧ್ಯಕ್ಷ ಎಸ್.ಕೆ.ಆದಿಲ್ ಖಾನ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಶಾಮನೂರು ಸರ್ಕಾರಿ ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಅಧ್ಯಕ್ಷರಾಗಿ ಮಂಜುನಾಥ್



ದಾವಣಗೆರೆ, ಅ.29- ಪಾಲಿಕೆ 43ನೇ ವಾರ್ಡಿನ ಶಾಮನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರನ್ನಾಗಿ ಹೆಚ್. ಮಂಜುನಾಥ್ ಮತ್ತು ಉಪಾಧ್ಯಕ್ಷರನ್ನಾಗಿ ಲಕ್ಷ್ಮಿ ಅವರನ್ನು ಪೋಷಕ ಪರಿಷತ್ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಪಾಲಿಕೆ ಸದಸ್ಯ ಕಲ್ಲಳ್ಳಿ ನಾಗರಾಜ್, ಪ್ರಕಾಶ ಗೌಡ, ಕಣ್ಣಾಳ ಅಂಜಿನಪ್ಪ, ರಾಜಪ್ಪ, ಒ.ಹೆಚ್. ಅಂಜಿನಪ್ಪ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


## ವಾಣಿಜ್ಯೋದ್ದೇಶಕ್ಕಾಗಿ ಬಾಡಿಗೆಗೆ ಜಾಗ ಬೇಕಾಗಿದೆ

ಪ್ರತಿ ಕಾಲಂನ ಕನಿಷ್ಠ ಅಂತರ 16 ಅಡಿ ಅಗಲ ಇರುವ ನೆಲ ಅಂತಸ್ತು 2000 ಅಡಿ ಅಥವಾ 1500 ಅಡಿ ನೆಲಮಹಡಿ ಮತ್ತು 1ನೇ ಮಹಡಿ ಹಾಗೂ ಕನಿಷ್ಠ 40 ಅಡಿ ಮುಂಭಾಗ ಆವರಣವಿರುವ ಜಾಗವು ವಾಣಿಜ್ಯೋದ್ದೇಶಕ್ಕಾಗಿ ಬೇಕಾಗಿದೆ.

ಸ್ಥಳ: ಎಂಸಿಸಿ 'ಎ' ಬ್ಲಾಕ್/ಎಂಸಿಸಿ 'ಬಿ' ಬ್ಲಾಕ್/ಪಿ.ಜೆ. ಬಡಾವಣೆ

ಆಸ್ತಿ ಮಾಲೀಕರು ನೇರವಾಗಿ ಸಂಪರ್ಕಿಸಿ :

ಫೋನ್ : 08182-268035


# ಖರೀದಿ ಕೇಂದ್ರಕ್ಕೆ ಒತ್ತಾಯ

ದಾವಣಗೆರೆ, ಅ.29- ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ನ.2ರಂದು ಮೆಕ್ಕೆಜೋಳ ಮತ್ತು ಭತ್ತ ಖರೀದಿ ಕೇಂದ್ರ ಆರಂಭಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬೈಕ್ ರ್‍ಯಾಲಿ ಮತ್ತು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ಮುಖಂಡ ಬುಳ್ಳಾಪುರದ ಹನುಮಂತಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಅಂದು ಬೆಳಗ್ಗೆ 11.30ಕ್ಕೆ ನಗರದ ತಾಲ್ಲೂಕು ಕಚೇರಿಯಿಂದ ಉಪವಿಭಾಗಾಧಿಕಾರಿ ಕಚೇರಿವರೆಗೆ ಬೈಕ್ ರ್‍ಯಾಲಿ ನಡೆಸಲಾಗುವುದು. ನಂತರ ಬಹಿರಂಗ ಸಭೆ ನಡೆಸಲಾಗುವುದು. ಸ್ಥಳಕ್ಕೆ ಬಂದು ಜಿಲ್ಲಾಧಿಕಾರಿಗಳು ರೈತರಿಂದ ಮನವಿ ಸ್ವೀಕರಿಸಿ, ಬೇಡಿಕೆ ಈಡೇರಿಸುವ ಬಗ್ಗೆ ಆಶ್ವಾಸನೆ ನೀಡಬೇಕು ಎಂದರು.

ಮಳೆಯಿಂದಾಗಿ ಆನಗೋಡು, ಮಾಯಕೊಂಡ, ಅಣಜಿ ಹೋಬಳಿ ಸೇರಿದಂತೆ ಹಲವೆಡೆ ಶೇ.50ರಷ್ಟು ಮೆಕ್ಕೆಜೋಳ ಬೆಳೆ ಹಾನಿಯಾಗಿದೆ. ಆದ್ದರಿಂದ ಜಿಲ್ಲಾಡಳಿತ, ಕೃಷಿ ಇಲಾಖೆ ಅಧಿಕಾರಿಗಳಿಂದ ಸಮೀಕ್ಷೆ ಮಾಡಿಸಿ ವರದಿ ತರಿಸಿ ಪರಿಹಾರ ನೀಡಬೇಕು. ಅಲ್ಪಸ್ವಲ್ಪ ಇಳುವರಿ ಬಂದಿರುವ ಮೆಕ್ಕೆಜೋಳವನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಖರೀದಿ ಕೇಂದ್ರ ಆರಂಭಿಸಬೇಕು. ರೈಲ ಸಾಲ ಮನ್ನಾ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ರೈತ ಮುಖಂಡರಾದ ಈಚಘಟ್ಟದ ಕರಿಬಸಪ್ಪ, ಕೊಗ್ಗನೂರು ಹನುಮಂತಪ್ಪ, ಬುಳ್ಳಾಪುರದ ಪರಮೇಶ್ವರಪ್ಪ, ಮಲ್ಲಶೆಟ್ಟಿಹಳ್ಳಿ ಬಸವರಾಜಪ್ಪ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಆರ್.ಬಿ.ಐ. ಗವರ್ನರ್ ಅವಧಿ ವಿಸ್ತರಣೆ

ನವದೆಹಲಿ, ಅ. 29 – ಆರ್.ಬಿ.ಐ. ಗವರ್ನರ್ ಶಕ್ತಿಕಾಂತ್ ದಾಸ್ ಅವರ ಅವಧಿಯನ್ನು ಕೇಂದ್ರ ಸರ್ಕಾರ 3 ವರ್ಷಗಳ ಕಾಲ ವಿಸ್ತರಿಸಿದೆ. ಅವರ ಅವಧಿ ಡಿಸೆಂಬರ್ 2024ರಲ್ಲಿ ಮುಕ್ತಾಯವಾಗಲಿದೆ. 2018ರಲ್ಲಿ ದಾಸ್ ಅವರನ್ನು ಮೂರು ವರ್ಷಗಳ ಅವಧಿಗೆ ಗವರ್ನರ್ ಆಗಿ ನೇಮಿಸಲಾಗಿತ್ತು. ಅವರ ಅವಧಿ ಡಿ.10ಕ್ಕೆ ಮುಕ್ತಾಯವಾಗಬೇಕಿತ್ತು. ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ನೇಮಕಾತಿ ಸಮಿತಿ ಸಭೆಯಲ್ಲಿ ಅವಧಿ ವಿಸ್ತರಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.




ನಮ್ಮೆಲ್ಲಾ ಗ್ರಾಹಕರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

New Arrivals in :
Stretchable Shirts
4-Way Stretch Pants
Ankle Fit Formal Pants
Pencil & Ankle Fit Jeans
& Many more

Adding Colors To Your Life
Readymade for Gents

96205 97214
# 6, Scout Hall Complex, Beside Vodafone Store, Janatha Bazaar Road, PJ Extension, DAVANGERE-2

Deepavali Dhamaka Offer!
Buy 3 Get 1 FREE!*




HOME STYLE
Jarekatte Plaza, Beside Savita Hotel, Shamanur Road, Near SS Mall, Davangere - 577004. Ph: 08192-230483
Cell: 98864 94432, 99456 89996





ಶ್ರೀ ಆರ್. ವೆಂಕಟರೆಡ್ಡಿ
ಅಧ್ಯಕ್ಷರು

# ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,

ಆಡಳಿತ ಕಛೇರಿ : ಹದಡಿ ರಸ್ತೆ, ದಾವಣಗೆರೆ-2. ಫೋನ್ : 99011 20124, 98447 36220 ಶಾಖೆ : ವಿದ್ಯಾನಗರ ದಾವಣಗೆರೆ-6. ಫೋನ್ : 08192-262392



ಶ್ರೀ ವಿ. ಪ್ರಕಾಶ್
ಉಪಾಧ್ಯಕ್ಷರು

## 27 ನೇ ವಾರ್ಷಿಕ ಮಹಾಸಭೆಯ ನೋಟಿಸ್

ನಮ್ಮ ಸಹಕಾರ ಸಂಘದ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 30-10-2021ರ ಶನಿವಾರ ಮಧ್ಯಾಹ್ನ 12.00 ಕ್ಕೆ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕುವೆಂಪು ಕನ್ನಡ ಭವನ, ವಿದ್ಯಾನಗರ ಕೆನರಾ ಬ್ಯಾಂಕ್ ಹತ್ತಿರ, ವಿದ್ಯಾನಗರ, ದಾವಣಗೆರೆ ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್. ವೆಂಕಟರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆದ ಕಾರಣ ಮಾನ್ಯ ಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಬೇಕೆಂದು ವಿನಂತಿ.



ಶ್ರೀ ಟಿ.ಹೆಚ್. ರಾಜಶೇಖರ್
ನಿರ್ದೇಶಕರು


ಶ್ರೀ ಮೇಕಾ ಮುರುಳಿಕೃಷ್ಣ
ನಿರ್ದೇಶಕರು


ಶ್ರೀ ಕೆ.ಬಿ. ನಾಗರಾಜ್
ನಿರ್ದೇಶಕರು


ಶ್ರೀ ನಾಗೇಂದ್ರ ಎನ್. ಲದ್ವಾ
ನಿರ್ದೇಶಕರು


ಶ್ರೀಮತಿ ಎ. ಶ್ರೀದೇವಿ ತಿಮ್ಮಾರೆಡ್ಡಿ
ನಿರ್ದೇಶಕರು


ಶ್ರೀ ಕೆ. ನಾರಾಯಣ
ನಿರ್ದೇಶಕರು


ಶ್ರೀ ಬಿ. ವೆಂಕಟೇಶ್ವರ ರೆಡ್ಡಿ
ನಿರ್ದೇಶಕರು


ಶ್ರೀ ಬಿ. ಯೋಗಿರೆಡ್ಡಿ
ನಿರ್ದೇಶಕರು


ಶ್ರೀ ಬಿ. ವೆಂಕಟೇಶ್ವರ ರೆಡ್ಡಿ
ನಿರ್ದೇಶಕರು


ರಾಜಾನಾಯಕ್
ನಿರ್ದೇಶಕರು


ಶ್ರೀಮತಿ ವೈ. ಸರೋಜ ವೆಂಕಟೇಶ್ವರ ರೆಡ್ಡಿ
ನಿರ್ದೇಶಕರು

### ದಿನಾಂಕ : 31.03.2021ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

| ಬಂಡವಾಳ ಮತ್ತು ಜವಾಬ್ದಾರಿಗಳು | ಮೊಬಲಗು | |
|---|---|---|
| ಷೇರು ಬಂಡವಾಳ | | 10,737,200.00 |
| ಕಾಯ್ದಿಟ್ಟ ಮತ್ತು ಇತರೆ ನಿಧಿಗಳು : | | 50,670,045.35 |
| ಕಾಯ್ದಿಟ್ಟ ನಿಧಿ | 29,474,247.12 | |
| ಕಟ್ಟಡ ನಿಧಿ | 13,621,860-27 | |
| ಕರಡು ಸಾಲದ ನಿಧಿ | 1,999,905.00 | |
| ಧರ್ಮಾರ್ಥ ನಿಧಿ | 131,739.00 | |
| ಡಿವಿಡೆಂಡ್ ಸಮೀಕರಣ ನಿಧಿ | 650.589.00 | |
| ಸಾಮಾನ್ಯ ಕಲ್ಯಾಣ ನಿಧಿ | 408,487.00 | |
| ಸಿಬ್ಬಂದಿ ಕ್ಷೇಮ ನಿಧಿ | 598,559.00 | |
| ಸಿಬ್ಬಂದಿ ಶಿಕ್ಷಣ ನಿಧಿ | 290,622.00 | |
| ಸಿಬ್ಬಂದಿ ನಿವೃತ್ತಿ ಕೊಡುಗೆ | 2,460,907.96 | |
| ಸಿಲ್ವರ್ ಜ್ಯುಬಿಲಿ ಫಂಡ್ | 1,033,129.00 | |
| ಠೇವಣಾತಿಗಳು | | 130,992,383.51 |
| ಗಡು ಠೇವಣಿ ಖಾತೆ | 47,368,818.00 | |
| ಉಳಿತಾಯ ಖಾತೆ | 18,322,291.36 | |
| ಚಾಲ್ತಿ ಖಾತೆ | 357,263.49 | |
| ಸ್ಥಗಿತ ಠೇವಣಿ ಖಾತೆ | 800,841.66 | |
| ಸಂಚಿತ ಠೇವಣಿ ಖಾತೆ | 4,058,468.00 | |
| ಶ್ರೀ ಶ್ರೀಶೈಲ ಯೋಜನಾ ನಿಧಿ ಖಾತೆ | 47,213,246.00 | |
| ಪಿಗ್ಮಿ ಠೇವಣಿ ಖಾತೆ | 12,414,000.00 | |
| ಪಿಗ್ಮಿ ಆಧಾರದ ಠೇವಣಿ ಖಾತೆ | 457,455.00 | |
| ಕೊಡತಕ್ಕ ಬಡ್ಡಿ | | 2,272,071.00 |
| ಕೊಡಬೇಕಾದ ಲಾಭಾಂಶ | 876,015.00 | |
| ಆಡಿಟ್ ಫೀ ಕೊಡತಕ್ಕ ಬಾಕಿ | 30,000.00 | 7,679,052.82 |
| ಚಾಲ್ತಿಯಲ್ಲಿರದ ಆಸ್ತಿಯ ಅವಕಾಶ | 5,880,014.00 | |
| ಸಿಬ್ಬಂದಿಗೆ ಕೊಡಬಕೇಕಾದ ಬೋನಸ್ | 487,798.00 | |
| ಸಿಬ್ಬಂದಿ ಗಳಿಕೆ ರಜೆ ನಗದೀಕರ | 400,000.00 | |
| ಜಿಎಸ್‌ಟಿ (ಕೊಡತಕ್ಕ ಬಾಕಿ) | 5,225.82 | |
| ಶಾಖಾ ಹೊಂದಾಣಿಕೆ | | 15,710,242.79 |
| ನಿವ್ವಳ ಲಾಭ | | 2,514.691.21 |
| ಒಟ್ಟು ರೂ. | | 220,575,686.68 |

| ಸ್ವತ್ತು ಮತ್ತು ಆಸ್ತಿಗಳು | ಮೊಬಲಗು | ಮೊಬಲಗು |
|---|---|---|
| ನಗದು ಶಿಲ್ಕು | | 508,001.00 |
| ನಗದು ಹಣ ಇತರೆ ಬ್ಯಾಂಕ್‌ಗಳಲ್ಲಿ | | 14,735,538.42 |
| ಡಿಡಿಸಿಸಿ ಬ್ಯಾಂಕ್ ಚಾಲ್ತಿ ಖಾತೆ | 34,717.56 | |
| ಬಾಪೂಜಿ ಬ್ಯಾಂಕ್ ಚಾಲ್ತಿ ಖಾತೆ, ದಾವಣಗೆರೆ. | 94,005.90 | |
| ಸಿಂಡಿಕೇಟ್ ಬ್ಯಾಂಕ್ ಚಾಲ್ತಿ ಖಾತೆ, ದಾವಣಗೆರೆ. | 53,304.03 | |
| ದಿ.ದಾ.ಹ. ಕೋ ಬ್ಯಾಂಕ್ ನಿ.,ಸ ಚಾಲ್ತಿ ಖಾತೆ ದಾವಣಗೆರೆ. | 208,266.00 | |
| ಐಡಿಬಿಐ ಬ್ಯಾಂಕ್ ಉಳಿತಾಯ ಖಾತೆ, ದಾವಣಗೆರೆ. | 14,209,143.63 | |
| ಐಡಿಬಿಐ ಬ್ಯಾಂಕ್ ಚಾಲ್ತಿ ಖಾತೆ, ದಾವಣಗೆರೆ. | 136,101.30 | |
| ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., | | 23,692.11 |
| ಎಲ್.ಐ.ಸಿ. ಆಫ್ ಇಂಡಿಯಾ ಮಂಗಳೂರು. | | 2,217,008.96 |
| ಷೇರು ಬಂಡವಾಳ | | |
| ಹೂಡಿಕೆಗಳು : | | |
| ಬಾಪೂಜಿ ಬ್ಯಾಂಕ್ ಹೂಡಿಕೆ, ದಾವಣಗೆರೆ. | 8,938,238.00 | 62,327,950.00 |
| ಬಾಪೂಜಿ ಬ್ಯಾಂಕ್ ಹೂಡಿಕೆ(ಕಟ್ಟಡ ನಿಧಿ), ದಾವಣಗೆರೆ. | 6,375,249.00 | |
| ಬಾಪೂಜಿ ಬ್ಯಾಂಕ್ ಹೂಡಿಕೆ (RFD), ದಾವಣಗೆರೆ. | 26,939,463.00 | |
| ಕರ್ನಾಟಕ ರಾಜ್ಯ ಸ.ಮ.ಮಂ.ನಿ.(ಎಫ್.ಡಿ.) | 50,000.00 | |
| ದಿ.ದಾ.ಹ. ಕೋ ಬ್ಯಾಂಕ್ ನಿ., ಹೂಡಿಕೆ ದಾವಣಗೆರೆ. | 20,000,000.00 | |
| ಡಿ.ಡಿ.ಸಿ.ಸಿ. ಬ್ಯಾಂಕ್ ಷೇರು ಬಂಡವಾಳ | 25,000.00 | |
| ಸಾಲಗಳು : | | 117,807,067.00 |
| ಬಂಗಾರದ ಆಭರಣಗಳ ಮೇಲಿನ ಸಾಲ | 84,780.00 | |
| ಮಾಲು ಆಧಾರದ ಮೇಲಿನ ಸಾಲ | 2,212,905.00 | |
| ಕ್ಯಾಷ್ ಕ್ರೆಡಿಟ್ ಸಾಲ | 832,751.00 | |
| ಆಧಾರದ ಕ್ಯಾಷ್ ಕ್ರೆಡಿಟ್ ಸಾಲ | 57,155,797.00 | |
| ಕಂತಿನ ಸಾಲ | 1,176,443.00 | |
| ಠೇವಣಾತಿಗಳ ಮೇಲಿನ ಸಾಲ | 1,237,872.00 | |
| ವಾಹನಗಳ ಮೇಲಿನ ಸಾಲ | 1,064,850.00 | |
| ಅಡವು ಆಧಾರದ ಸಾಲ | 54,041,669.00 | |
| ಗಣಕಯಂತ್ರ ಬಿಡಿ ಭಾಗಗಳು | | 17,582.00 |
| ಯು.ಪಿ.ಎಸ್. ಮತ್ತು ಬ್ಯಾಟರಿಗಳು | | 27,851.00 |
| ಪೀಠೋಪಕರಣಗಳ ಬೆಲೆ : | | 114,428.00 |
| ಖಾಲಿ ನಿವೇಶನ | | 6,929,790.00 |
| ಇತರೆ ಆಸ್ತಿಗಳು : | | 156,535.40 |
| ಲೇಖನ ಸಾಮಗ್ರಿಗಳು | 122,446.40 | |
| ವಾಚನಾಲಯ ಪುಸ್ತಕ | 4,089.00 | |
| ವಿದ್ಯಾನಗರ ಶಾಖೆ ಮುಂಗಡ | 30,000.00 | |
| ಶಾಖಾ ಹೊಂದಾಣಿಕೆ | | 15,710,242.79 |
| ಒಟ್ಟು ರೂ. | | 220,575,686.68 |

### ದಿನಾಂಕ : 31.03.2021ಕ್ಕೆ ಇದ್ದಂತೆ ಲಾಭ - ನಷ್ಟದ ತಃಖ್ತೆ

| ವೆಚ್ಚ | ಮೊಬಲಗು | ಆದಾಯ | ಮೊಬಲಗು |
|---|---|---|---|
| ಠೇವಣಾತಿಗಳ ಮೇಲಿನ ಬಡ್ಡಿ | 9,949.034.00 | ಸಾಲಗಳ ಮೇಲೆ ಬಂದ ಬಡ್ಡಿ | 18,064,582.00 |
| ಸಿಬ್ಬಂದಿ ಸಂಬಳ | 3,311,342.00 | ಕಮೀಷನ್ | 42,685.80 |
| ಬಾಡಿಗೆ | 486,400.00 | ಸೇವಾ ಶುಲ್ಕ | 166,923.00 |
| ದೀಪ ಮತ್ತು ವಿಮೆ | 79,689.00 | ಸಂಚಯ ಮೇಲಿನ ಆದಾಯ | 499,527.00 |
| ಅಂಚೆ, ತಂತಿ ಮತ್ತು ದೂರವಾಣಿ | 42,509.00 | ಲಾಕರ್ ಬಾಡಿಗೆ | 24,000.00 |
| ಮುದ್ರಣ ಮತ್ತು ಲೇಖನ ಸಾಮಗ್ರಿಗಳು | 50,911.32 | ಷೇರು ಧನ | 450.00 |
| ಜಾಹೀರಾತು | 7,236.00 | ಪ್ರವೇಶ ಧನ | 900.00 |
| ವಂತಿಕೆ | 5,568.00 | ಇ ಸೇವಾ ಶುಲ್ಕ | 52,531.17 |
| ಇತರೆ ಖರ್ಚುಗಳು | 50,493.00 | ಬಡ್ಡಿ (ಆಡಳಿತ ಕಛೇರಿಯಿಂದ ಕೊಟ್ಟಿದ್ದು) | 848,834.00 |
| ವಾರ್ಷಿಕ ಮಹಾಸಭೆಯ ವೆಚ್ಚ | 28,906.00 | | |
| ಪಿಗ್ಮಿ ಕಮೀಷನ್ | 720,467.00 | | |
| ಆಡಿಟ್ ಫೀ ಕೊಟ್ಟಿದ್ದು | 30,000.00 | | |
| ಸವಕಳಿ | 33,986.00 | | |
| ಚಾಲ್ತಿಯಲ್ಲಿರದ ಆಸ್ತಿಯ ಅವಕಾಶ (NPA) | 1,010,981.25 | | |
| ನಿರ್ದೇಶಕರ ಸಭಾ ಭತ್ಯೆ | 75,500.00 | | |
| ಸಿಬ್ಬಂದಿ ನಿವೃತ್ತಿ ಕೊಡುಗೆ (ಅವಕಾಶ) | 243,899.00 | | |
| ಸಿಬ್ಬಂದಿ ಭವಿಷ್ಯ ನಿಧಿ | 335,622.00 | | |
| ಎಂಪ್ಲಾಯರ್ ಇ.ಎಸ್.ಐ.ಸಿ. | 67,639.00 | | |
| ಸಿಬ್ಬಂದಿ ಬೋನಸ್ (ಅವಕಾಶ) | 487,798.00 | | |
| ಪ್ರವಾಸ ಭತ್ಯೆ | 107,048.00 | | |
| ಇ-ಸ್ಟಾಂಪ್ ವೆಚ್ಚ | 16,669.19 | | |
| ಹೂಡಿಕೆಯ ಮೇಲಿನ ಸಾಲದ ಬಡ್ಡಿ | 1,414.00 | | |
| ಆದಾಯ ತೆರಿಗೆ | 19,630.00 | | |
| ಆದಾಯ ತೆರಿಗೆ ಆಡಿಟ್ ಫೀ | 20,000.00 | | |
| ವೃತ್ತಿ ತೆರಿಗೆ | 3,000.00 | | |
| ನಿವ್ವಳ ಲಾಭ | 2,514,691.21 | | |
| ಒಟ್ಟು ಮೊತ್ತ | 19,700,432.97 | ಒಟ್ಟು ಮೊತ್ತ | 19,700,432.97 |

### ಲೆಕ್ಕ ಪರಿಶೋಧನಾ ದೃಢೀಕರಣ ಪತ್ರ

ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ದಾವಣಗೆರೆ ಇದರ 2020-21ನೇ ಸಾಲಿನ ಲೆಕ್ಕ ಪತ್ರಗಳನ್ನು ನಾನು ಪರಿಶೀಲಿಸಿರುತ್ತೇನೆ. ಲೆಕ್ಕ ಪರಿಶೋಧನೆಗೆ ಅಗತ್ಯವಿದ್ದ ಲಭ್ಯ ಮಾಹಿತಿಗಳನ್ನು ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತೇನೆ. ಅವುಗಳು ನನ್ನ ಅನುಭವ ಮತ್ತು ತಿಳುವಳಿಕೆ ಮಟ್ಟಿಗೆ ತೃಪ್ತಿಕರವಾಗಿರುತ್ತವೆ. ನನಗೆ ಒದಗಿಸಿದ ಮಾಹಿತಿಗಳ ಆಧಾರದ ಮೇರೆಗೆ 2020-21ನೇ ಸಾಲಿನ ಲಾಭ-ನಷ್ಟದ ತಃಖ್ತೆ ಮತ್ತು ದಿ. 31.3.2021ರಲ್ಲಿ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆಯು ಇದರೊಂದಿಗೆ ಲಗತ್ತಿಸಿದ ನನ್ನ ಪ್ರತ್ಯೇಕ ಲೆಕ್ಕ ಪರಿಶೋಧನಾ ವರದಿಗೆ ಒಳಪಟ್ಟಂತೆ ಈ ಸಹಕಾರ ಸಂಸ್ಥೆಯ ನೈಜ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಮೊಕ್ಕಾಂ : ದಾವಣಗೆರೆ. ದಿನಾಂಕ : 16.08.2021

ವಿಶೇಷ ಸೂಚನೆ : 1) ಸರ್ವ ಸದಸ್ಯರುಗಳಿಗೆ ಈಗಾಗಲೇ ವಾರ್ಷಿಕ ವರದಿಯ ಪುಸ್ತಕವನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ಈ ಪೈಕಿ ಅನೇಕ ವರದಿ ಪುಸ್ತಕಗಳು ವಿಳಾಸ ಸರಿಯಿಲ್ಲವೆಂದು ವಾಪಸ್ ಬಂದಿರುತ್ತವೆ. ವರದಿ ಪುಸ್ತಕ ತಲುಪದೇ ಇರುವ ಮಾನ್ಯ ಸದಸ್ಯರು ಇದೇ ವಾರ್ಷಿಕ ಮಹಾಸಭೆಯ ನೋಟೀಸು ಎಂದು ತಿಳಿದು, ಸಂಘವು ನೀಡಿರುವ ಗುರುತಿನ ಚೀಟಿಯನ್ನು ತಪ್ಪದೇ ಕಡ್ಡಾಯವಾಗಿ ತರಬೇಕಾಗಿ ವಿನಂತಿ. ಮತ್ತು ತಮ್ಮ ಹಾಲಿ ವಿಳಾಸವನ್ನು ಸಂಘಕ್ಕೆ ನೀಡಿ ಸರಿಪಡಿಸಿಕೊಳ್ಳಲು ಸೂಚಿಸಿದೆ.

27ನೇ ವಾರ್ಷಿಕ ಮಹಾಸಭೆಯ ಪ್ರಯುಕ್ತ ದಿನಾಂಕ : 30-10-2021ರ ಶನಿವಾರದಂದು ಸಂಘದ ಕಚೇರಿಗೆ ರಜೆ ಘೋಷಿಸಲಾಗಿದೆ.

ಚನ್ನಬಸವಣ್ಣ ಅಂಡ್ ಕೋ.
ಸನ್ನದು ಲೆಕ್ಕ ಪರಿಶೋಧಕರು, ದಾವಣಗೆರೆ.
ಸದಸ್ಯತ್ವ ಸಂಖ್ಯೆ : 213853


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte